ಸಿಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ. ಮೇಲ್ಪಟ್ಟು ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ ಅವಕಾಶ. ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಶೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು. ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು. ಸಂದರ್ಶನ ದಿನಾಂಕ: 16–6–2023. ಸಮಯ: 1.30 pm ಕ್ಕೆ ಸಂಪರ್ಕಿಸಿ:
7892303484, 9483247455

Job Available
M/F, Age / Qual, No bar
Fr / Exp. for Mys / Blr.
W.H: 10-5. Posts vacant: Resident Mgr, Mrktg / Pub. Rel. Assts, Helpers / Ayah.
9449923880, 9448628480
(Agents Excuse)

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

For Sale
Buy & Sell site ,house, land
1) 20x30 ,30x40 house RK Nagar Dattagalli Kuvempu Nagar nagar
2) 30x40 sites Srinagar attch (JP Nagar)
3)30x40 Duplex and ground first house Srirampura
4) Commercial 25 Guntas Land Narasipura toll Near
5)20x30,30x40,40x60 sites in H D Kote Road and Bogadi Road
9538690359
9035990359

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 16,000 ರಿಂದ 38,000/- (ESI+PF+OT) ಷರತ್ತು ಅನ್ವಯ
6366141586,6364103418

BUILDING WITH 6 UNITS 2BHK FLATS
And Space for Roof Restaurant Available for Rent Suitable for Service Apartment Company Guest House
9148448159

Rotary West Paul Harris Vocational Training Institute
Kanakadasa Nagar (Dattagalli)
To help the poor and backward classes, Basic training in Computers & Tailoring will be given from **Monday 19th June 2023.** Interested can register their names at the Institute.
-PRINCIPAL

AFFIDAVIT
I, Vinutha N.M., W/o N.S. Manjunath, residing at #2566/2, Kaveri Extension, Opp. K.P.T.C.L. Office, Srirangapatna, Mandya District, in Aadhar Card No. 4857 3894 9108, I mentioned my initial with name Vinutha as well as Vinutha and Vinutha N.M., all the two names are my name only. Further I swear in front of Notary S.M. Chandrashekara, that in future my name called as Vinutha N.M.
Sd/- Vinutha N.M.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSE FOR SALE
33X40 North Facing Well Built House Near Sangama Circle 2nd Stage, Hebbal
9919917519

ಚೈತ್ರ ಟಿಂಬರ್ಸ್
Chaitra Timbers
M.P.Round Logs Teak Wood Available at Best Rate
ಎಂ.ಪಿ.ರೌಂಡ್ ಲಾಗ್ಸ್ ಟೀಕ್ ವುಡ್ ರಿಯಾಯಿತಿ ದರದಲ್ಲಿ ಲಭ್ಯವಿದೆ
9986562429

NEW OXFORD PUBLIC SCHOOL
Srirangapatna
Requires Kannada Teacher to Handle High School Classes.
INTERESTED QUALIFIED CANDIDATES WITH RESUME CAN WALK-IN FOR AN INTERVIEW WITH YOUR CREDENTIALS
Qualification : MA, B.Ed,
9844739841

ನಿವೇಶನ ಮಾರಾಟಕ್ಕಿದೆ
ಸುಸಜ್ಜಿತವಾದ 5BHK ಮನೆಯುಳ್ಳ 60x40 ನಿವೇಶನ ಮಾರಾಟಕ್ಕಿದೆ.
ವಿಳಾಸ: #764, 8ನೇ ಕ್ರಾಸ್, 4ನೇ ಹಂತ, ಜೈನ್ ಹಾಸ್ಟೆಲ್ ರೋಡ್, ನಾಗಲಿಂಗೇಶ್ವರ ದೇವಸ್ಥಾನದ ಹತ್ತಿರ, ತೊಣಚಿಕೊಪ್ಪಲು, ಬಡಾವಣೆ (TK Layout) ಮೈಸೂರು
8971334799
9611537004

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
8749098879

ಕೆಲಸಕ್ಕೆ ಬೇಕಾಗಿದ್ದಾರೆ
ಆಲನಹಳ್ಳಿಯಲ್ಲಿ ಫ್ಯಾಕ್ಟರಿ ಕೆಲಸಕ್ಕೆ 20 ರಿಂದ 35 ವಯಸ್ಸಿನ ಪುರುಷರು ಬೇಕಾಗಿದ್ದಾರೆ
9606570623

ಬೇಕಾಗಿದ್ದಾರೆ
ಕಾರ್ ವಾಷಿಂಗ್ ಸೆಂಟರ್‌ಗೆ ಯುವಕರು ಬೇಕಾಗಿದ್ದಾರೆ ವಿದ್ಯಾರ್ಹತೆ ಬೇಕಿಲ್ಲ. ಉಚಿತ ವಸತಿ, ಊಟ
9483181835
9590966699

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋಚರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ, ಮೈಸೂರು–570006

BRIDE / GROOMS MATCH MAKERS
ಎಲ್ಲಾ ಜಾತಿಯ ಮದುವೆ ಮಾಡಿಸುತ್ತೇವೆ
1) ಮನೆ ಅಳಿಯ ಬೇಕು Age 35, 2) ಸ್ವತಂತ್ರ ಡೈವೋರ್ಸ್ ವಧು Age 38, 3) ಸ್ವತಂತ್ರ 160 ವಧುಗೆ ಯಾವುದೇ ಜಾತಿಯ ವರ ಬೇಕು. 4) ಶ್ರೀಮಂತ Age 50 ಡಾಕ್ಟರ್‌ಗೆ ಯಾವುದೇ ಜಾತಿಯ ವಧು ಬೇಕು. ತಕ್ಷಣ ಶ್ರೀಮಂತ 600 ವರರಿಗೆ ಡಾಕ್ಟರ್/ಇಂಜಿನಿಯರ್‌ಗೆ ಯಾವುದೇ ಜಾತಿಯ ವಧುಗಳು ಬೇಕು.
ಶ್ರೀಮಂತ ಯಾವುದೇ ಜಾತಿಯ ಡಾಕ್ಟರ್/ಇಂಜಿನಿಯರ್ ಡಿಗ್ರಿ ಕರ್ನಾಟಕಾದ್ಯಂತ ಕಛೇರಿಗಳಲ್ಲಿರುವ ಲಕ್ಷಾಂತರ ವಧು/ವರರ, ಆಯ್ಕೆಗೆ ಭೇಟಿ ನೀಡಿ
7975728012

ವಧು ಬೇಕಾಗಿದೆ
ಎರಡನೇ ವರ ವಿಧುರ, ವಿಚ್ಛೇದಿತ, ಉತ್ತಮ ದೇಹದಾರ್ಢ್ಯ ಹೊಂದಿರುವ ಲಿಂಗಾಯಿತ ಪಂಗಡ 5.7 B.Com, 42 Yrs ಮಕ್ಕಳಿಲ್ಲ ಸ್ವ ಉದ್ಯೋಗಿ, ಆರೋಗ್ಯವಂತ ಲಿಂಗಾಯಿತ 2ನೇ ವರನಿಗೆ ಲಿಂಗಾಯಿತ, ನಾಮಧಾರಿ, ಯಾವುದೇ ಸಸ್ಯಾಹಾರಿ ವರ್ಗ ಸೇರಿದ ವಧು ಬೇಕಾಗಿದೆ. ವರ ಅನುಕೂಲಸ್ಥ ಮಧ್ಯಮ ವರ್ಗ ಶ್ರೀಮಂತನಿಗೆ ಸುಸಂಸ್ಕೃತ ವಿದ್ಯಾವಂತ, ಕನ್ಯೆ ಬೇಕಾಗಿದೆ. ವಯಸ್ಸಿನ ಅಭ್ಯಂತರವಿಲ್ಲ ಭದ್ರತೆಗೆ ಅವಕಾಶ ಇದೆ. ಸಂಸಾರದಲ್ಲಿ ಹೊಂದಿಕೊಂಡು ಹೋಗುವವರುಬೇಕಾಗಿದೆ. ಮದುವೆ ಶೀಘ್ರ
9342125252

ವಧು ಬೇಕಾಗಿದೆ
ಮೊದಲಿಯಾರ್/ವನ್ನಿಯ ಕುಲ ಕ್ಷತ್ರಿಯ ವಧು ಬೇಕಾಗಿದೆ. 30 ವರ್ಷದ ವಿದ್ಯಾವಂತ Lecturer ಉದ್ಯೋಗದಲ್ಲಿರುವ ಅನುಕೂಲಸ್ಥ ವರನಿಗೆ 22 ರಿಂದ 27 age ವಿದ್ಯಾವಂತ / ಉದ್ಯೋಗದಲ್ಲಿರುವ ವಧು ಬೇಕಾಗಿದೆ.
9741880671

WE ARE HIRING FOR BRIC 2 BRIC CONSTRUCTION
Accountant - (Mini-2 year Exp.)
Sales Executive - (Min-2 Year Exp.)
Marketing Executive (Min-2 Year Exp.)
Office Boy, 2 Wheeler Must
Address: # 270, Pradvin Plaza, Bogadi Road, Sharadadevi Nagar, Mysore
9353155166

ಬೇಕಾಗಿದ್ದಾರೆ
ಉನ್ನತ ಕಂಪನಿ ಹಾಗೂ ಕಾರ್ಖಾನೆಗಳಲ್ಲಿ (ಕೂರ್ಗಳ್ಳಿ ಹೆಬ್ಬಾಳು, ಮೇಟಗಳ್ಳಿ, ಕಡಕೊಳ ಮೈಸೂರು) ಇಲ್ಲಿ ಕೆಲಸ ಮಾಡಲು (7th, 10th, PUC, Any Degree& ITI Diploma) ವಿದ್ಯಾಭ್ಯಾಸವುಳ್ಳ ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ. (ವಿದ್ಯಾಭ್ಯಾಸ ಇಲ್ಲದೆ ಇರುವವರು ಸಹ ಬೇಕಾಗಿದ್ದಾರೆ. (ವೇತನ 12000 ರಿಂದ 18000ರ ವರೆಗೆ (ESI, PF) ಹಾಗೂ ಮಹಿಳೆಯರಿಗೆ ಉಚಿತ ಪಿ.ಜಿ. ಸೌಲಭ್ಯವಿದೆ)
(Accountants Knowledge Data Entry Operator, Machine Operator, Helper, House Keeping, Security, Stewards)
ರೆಸಾರ್ಟ್‌ಗಳಲ್ಲಿ ಕೆಲಸ ಮಾಡಲು ಮಹಿಳೆಯರು & ಪುರುಷರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಸೌಲಭ್ಯವಿದೆ.
90364613247,9606226036

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಎಲ್ಲಾ ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.
ಡಾ. ಗುರೂಜಿ
9448229184
7899625268

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಶುಗರ್‌ಗೆ 50 ಕೋಟಿ ಬಿಡುಗಡೆ

ಮುಖ್ಯಮಂತ್ರಿಗೆ ದಿನೇಶ್ ಗೂಳಿಗೌಡ ಅಭಿನಂದನೆ





ಮಂಡ್ಯ, ಜೂ.14– ರಾಜ್ಯದಲ್ಲಿನ ಸರ್ಕಾರಿ ಸ್ವಾಮ್ಯದ ಏಕೈಕ ಸಕ್ಕರೆ ಕಾರ್ಖಾನೆ ಎಂಬ ಹೆಗ್ಗಳಿಕೆ ಹೊಂದಿರುವ ಮಂಡ್ಯ ಜಿಲ್ಲೆಯ ಮೈಶುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನ ಹಾಗೂ ದುಡಿಯುವ ಬಂಡವಾಳಕ್ಕಾಗಿ 50 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ.

ಹಣ ಬಿಡುಗಡೆಗೆ ಹಣಕಾಸು ಇಲಾಖೆಯಿಂದ ಅನುಮೋದನೆ ದೊರಕಿದ ಒಂದೇ ವಾರದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಹಣ ಬಿಡುಗಡೆ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಮಂಡ್ಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನಪರಿಷತ್ ಸದಸ್ಯ ದಿನೇಶ ಗೂಳಿಗೌಡ ಅವರು ತಿಳಿಸಿದ್ದಾರೆ.

2023–24 ನೇ ಸಾಲಿನಲ್ಲಿ ಕಬ್ಬು ನುರಿಸಲು ಸರ್ಕಾರದಿಂದ ತುರ್ತಾಗಿ ಧನ ಸಹಾಯ ನೀಡಬೇಕೆಂದು ತಾವು ಮಾಡಿದ್ದ ಮನವಿಗೆ ಸ್ಪಂದಿಸಿ ಸಿಎಂ ತಕ್ಷಣವೇ ಹಣ ಬಿಡುಗಡೆಗೆ ವ್ಯವಸ್ಥೆ ಮಾಡಿದ್ದಾರೆ. ಇದು ಈ ಭಾಗದ ರೈತರಿಗೆ ವರದಾನವಾಗಿದೆ. ರೈತರ ಹಿತದೃಷ್ಟಿಯಿಂದ ಕೂಡಲೇ ಹಣ ಮಂಜೂರು ಮಾಡಿರುವುದಕ್ಕೆ ರೈತರ ಪರವಾಗಿ ಹಾಗೂ ಮಂಡ್ಯ ಜಿಲ್ಲೆಯ ಸಮಸ್ತ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ದಿನೇಶ್ ಗೂಳಿಗೌಡ ಹೇಳಿದ್ದಾರೆ. ಕಬ್ಬು ಕಟಾವು ಪ್ರಾರಂಭವಾಗುವ ಮೊದಲು ಗ್ಯಾಂಗ್‌ಗಳಿಗೆ ನೀಡಲು ಹಣದ ಅವಶ್ಯಕತೆ ಇದೆ. ಯಂತ್ರಗಳ ದುರಸ್ತಿಗಳೂ ಇವೆ. ಅದಕ್ಕಾಗಿ ತಕ್ಷಣ ಹಣ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಲಾಗಿತ್ತು. ಹೀಗಾಗಿ ಕಾರ್ಖಾನೆ ಪ್ರಾರಂಭೋತ್ಸವ ಹಾಗೂ ಗ್ಯಾಂಗ್‌ಗಳಿಗೆ ನೀಡಲು 15 ಕೋಟಿ ರೂ. ಹಾಗೂ ಕಾರ್ಖಾನೆಯ ದುಡಿಯುವ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್) ಗಾಗಿ 35 ಕೋಟಿ ರೂ. ನೀಡಲು ಹಣಕಾಸು ಇಲಾಖೆ ಒಪ್ಪಿಗೆ ನೀಡಿತ್ತು. ಈಗ ರಾಜ್ಯ ಸರ್ಕಾರ ಅನುದಾನವನ್ನೂ ಬಿಡುಗಡೆ ಮಾಡಿದೆ.

ಸರ್ಕಾರದ ಈ ಸಹಾಯದಿಂದ ಅವಧಿಗೆ ಸರಿಯಾಗಿ ಕಾರ್ಖಾನೆಯಲ್ಲಿ ಕಬ್ಬು ನುರಿಸುವಿಕೆ ಪ್ರಾರಂಭಿಸಲು ಅನುಕೂಲವಾಗಲಿದೆ. ರೈತರಿಗೆ ಸಕಾಲದಲ್ಲಿ ಕಬ್ಬು ಕಟಾವು ಹಾಗೂ ಹಣ ಬಿಡುಗಡೆಗೂ ಸಹಕಾರಿಯಾಗಲಿದೆ ಎಂದು ಶಾಸಕ ದಿನೇಶ ಗೂಳಿಗೌಡ ಅವರು ತಿಳಿಸಿದ್ದಾರೆ.

ಮಂಡ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಉದ್ಘಾಟನೆ



ಕೆಆರ್‌ಎಸ್ ಡ್ಯಾಂನಲ್ಲಿ ನೀರು ಬಹಳ ಕಡಿಮೆ ಇದೆ. ಅನಿವಾರ್ಯವಾಗಿ ಡ್ಯಾಂನಿಂದ ನಾಲೆಗೆ ನೀರು ಬಿಡಬೇಕಾಗಿತ್ತು, ಬಿಟ್ಟಿದ್ದೇವೆ. ಮೂರ್ನಾಲ್ಕು ಟಿಎಂಸಿ ಮಾತ್ರ ಬಳಸಿಕೊಳ್ಳಬಹುದಾಗಿದೆ. ಮಳೆಗಾಗಿ ದೇವರಲ್ಲಿ ಪ್ರಾರ್ಥಿಸಿಕೊಳ್ಳುವುದಷ್ಟೇ ನಮಗೆ ಇರುವ ಮಾರ್ಗ. ಎರಡು ಮೂರು ದಿವಸದಲ್ಲಿ ದೇವರು ಕರುಣೆ ತೋರಿಸಿ ಮಳೆಯಾದರೆ ನಾವು ನೀವೆಲ್ಲ ನೆಮ್ಮದಿಯಾಗಿ ಇರಬಹುದು.

–ಚಲುವರಾಯಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ

ಮಂಡ್ಯ, ಜೂ.14– ಜಿಲ್ಲೆಯ ಸಾರ್ವಜನಿಕರ ಸೇವೆಗೆ ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ತೆರೆಯಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಬುಧವಾರ ನಗರದ ಡಿಸಿ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೂತನ ಕಚೇರಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಈ ಕಚೇರಿಯಲ್ಲಿ ನಾನು ಪ್ರತಿದಿನ ಇರಲು ಆಗಲ್ಲ. ನನ್ನ ಆಪ್ತ ಸಹಾಯಕರು ಕಚೇರಿಯಲ್ಲಿ ಇರುತ್ತಾರೆ. ಈ ಕಚೇರಿ ಜನರ ಸೇವೆಗೆ ಸದಾ ತೆರೆದಿರುತ್ತದೆ ಎಂದರು. ಯಾರೇ ಸಾರ್ವಜನಿಕರು ಬಂದು ಸಮಸ್ಯೆ ಹೇಳಿಕೊಂಡರೂ ಅದಕ್ಕೆ ಪರಿಹಾರ ಹುಡುಕುವ ಕೆಲಸ ಇಲ್ಲಿ ನಡೆಯಲಿದೆ. ನಾನು ಮಂಡ್ಯಕ್ಕೆ ಬಂದಾಗ ಈ ಕಚೇರಿಗೆ ಬಂದು ಹೋಗುತ್ತೇನೆ. ಕಚೇರಿ ತೆರೆದಿರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುವ ಜೊತೆಗೆ ಅವರ ಸಮಸ್ಯೆ ಸಹ ಬಲುಬೇಗ ಬಗೆಹರಿಯಲಿದೆ ಎಂದು ಭರವಸೆ ನೀಡಿದರು.

ಕಾಂಗ್ರೆಸ್–ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣದ ಬಗ್ಗೆ ಸಂಸದ ಪ್ರತಾಪ್ ಸಿಂಹ ಹೇಳಿಕೆ ವಿಚಾರದ ಬಗ್ಗೆ ಮಾತನಾಡಿ, ಬಿಜೆಪಿಯವರೇ ಹೊಂದಾಣಿಕೆಗೆ ಹೆಸರಾಗಿರುವವರು. ಕುಮಾರಸ್ವಾಮಿಯವರೇ ಹಲವು ಬಾರಿ ಬಿಜೆಪಿ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿರುವ ಬಗ್ಗೆ ಸುಳಿವು ನೀಡಿದ್ದಾರೆ. ಹೊಂದಾಣಿಕೆ ಮಾಡಿಕೊಳ್ಳದ ಏಕೈಕ ಪಕ್ಷ ಎಂದರೆ ಅದು ಕಾಂಗ್ರೆಸ್ ಎಂದರು.

ಅಧಿಕಾರಿಗಳ ಸಭೆಯಲ್ಲಿ ಕರ್ನಾಟಕ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಭಾಗಿ ವಿಚಾರದ ಬಗ್ಗೆ ಮಾತನಾಡಿ, ಅಧಿಕೃತ ಸಭೆಯಲ್ಲಿ ಭಾಗಿಯಾಗೋದು ಸರಿಯಲ್ಲ. ಆದರೆ ಖಾಸಗಿ ಸಭೆಯಲ್ಲಿ ನಮ್ಮ ಪಕ್ಷದ ನಾಯಕರ ಜತೆ ಕುಳಿತು ಸುರ್ಜೇವಾಲ ಚರ್ಚಿಸಿದ್ದಾರೆ. ಅದು ಅಪರಾಧವಲ್ಲ. ಸುರ್ಜೇವಾಲ ಅವರು, ಮಾಜಿ ಸಂಸದರು ಹಾಗೂ ಹಾಲಿ ರಾಜ್ಯಸಭಾ ಸದಸ್ಯರು, ಶಾಸಕರ ಸಭೆಯಲ್ಲಿ ಕುಳಿತಿದ್ದರೇ ಹೊರತು ಬೇರ್ಯಾವ ಅಧಿಕಾರಿಗಳ ಸಭೆಯನ್ನು ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

ಇದೇ ಸಂದರ್ಭದಲ್ಲಿ ಶಾಸಕ ಗಣಿಗ ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ, ಜಿ.ಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಮಾಜಿ ಶಾಸಕ ಹೆಚ್.ಬಿ.ರಾಮು, ಕಾಂಗ್ರೆಸ್ ಮುಖಂಡರಾದ ಡಾ.ಕೃಷ್ಣ, ಅಸಾದುಲ್ಲಾಖಾನ್, ಉಮ್ಮಡಹಳ್ಳಿ ಶಿವಪ್ಪ, ಸಿ.ಡಿ.ಗಂಗಾಧರ್, ಸಿ.ಎಂ.ದ್ಯಾವಪ್ಪ ಇತರರು ಉಪಸ್ಥಿತರಿದ್ದರು.

ಶಾಸಕರ ಕಚೇರಿ ಉದ್ಘಾಟನೆ: ಮಂಡ್ಯ ನಗರಸಭೆ ಕಚೇರಿಯಲ್ಲಿ ಮಂಡ್ಯ ವಿಧಾನ ಸಭಾ ಕ್ಷೇತ್ರದ ಶಾಸಕ ಗಣಿಗ ರವಿ ಕುಮಾರ್ ಅವರ ನೂತನ ಕಚೇರಿಯನ್ನು ಉದ್ಘಾಟನೆ ಮಾಡಲಾಯಿತು.

ಬಳಿಕ ಮಾತನಾಡಿದ ಶಾಸಕ ರವಿ ಕುಮಾರ್, ಸಾರ್ವಜನಿಕರ ಸೇವೆಗಾಗಿ ಕಚೇರಿಯನ್ನು ತೆರೆಯಲಾಗಿದ್ದು, ಮಂಡ್ಯ ನಗರ ಸೇರಿದಂತೆ ಗ್ರಾಮೀಣ ಪ್ರದೇಶದ ಜನರು ತಮ್ಮ ಸಮಸ್ಯೆಗಳನ್ನು ಬಗೆಹರಿಸಲು ಕಚೇರಿಗೆ ಭೇಟಿ ಕೊಡಬಹುದಾಗಿದೆ ನಾನಿಲ್ಲದಿದ್ದರೂ ಕಚೇರಿ ಸಿಬ್ಬಂದಿ ಸದಾ ಕಾಲ ಕಚೇರಿಯಲ್ಲಿ ಹಾಜರಿರುತ್ತಾರೆ. ತಮ್ಮ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದು ಹೇಳಿದರು.

ಮೇಲುಕೋಟೆಯಲ್ಲಿ ಗರುಡೋತ್ಸವ

ಮೇಲುಕೋಟೆ, ಜೂ.14– ಕಳೆದ ಏಳು ದಿನಗಳಿಂದ ನಡೆಯುತ್ತಿದ್ದ ಪಲ್ಲವೋತ್ಸವ ಬುಧವಾರ ರಾತ್ರಿ ಚೆಲುವನಾರಾಯಣಸ್ವಾಮಿಗೆ "ಗರುಡೋತ್ಸವ" ನೆರವೇರುವುದರೊಂದಿಗೆ ಸಂಪನ್ನವಾಯಿತು.



ಪಲ್ಲವೋತ್ಸವ ಶಾತ್ತುಮೊರೈ ಪ್ರಯುಕ್ತ ಶ್ರೀದೇವಿ ಭೂದೇವಿ ಸಮೇತನಾದ ಶ್ರೀ ಚೆಲುವನಾರಾಯಣಸ್ವಾಮಿಗೆ ದ್ವಾದಶಾರಾಧನೆಯೊಂದಿಗೆ ಅಭಿಷೇಕ ನೆರವೇರಿತು. ನಂತರ ವೇದ ದಿವ್ಯಪ್ರಬಂಧ ಪಾರಾಯಣದೊಂದಿಗೆ ಶಾತ್ತುಮೊರೈ ಕಾರ್ಯಕ್ರಮಗಳು ವೈಭವದಿಂದ ನೆರವೇರಿತು. ಪಲ್ಲವೋತ್ಸವ ಕಾರ್ಯಕ್ರಮಗಳು ಕಳೆದ ಜೂ8ರಿಂದಲೇ ಆರಂಭವಾಗಿದ್ದು, ಪ್ರತಿದಿನ ಬೆಳಗ್ಗೆ ಅಭಿಷೇಕ ನಡೆದವು ಪ್ರತಿ ಸಂಜೆ ಸ್ವಾಮಿಗೆ ಮಂಟಪ, ಅಶ್ವ, ಗಜ, ಆದಿಶೇಷ ಹನುಮಂತ ವಾಹನೋತ್ಸವಗಳು ನೆರವೇರಿದವು. ಕೊನೆಯ ದಿನವಾದ ಬುಧವಾರ ಗರುಡವಾಹನೋತ್ಸವ ಅದ್ದೂರಿಯಾಗಿ ನಡೆಯಿತು. ಪಲ್ಲವೋತ್ಸವದಲ್ಲಿನ ಸಂಪ್ರದಾಯದಂತೆ ಪ್ರತಿ ಮಧ್ಯಾಹ್ನ ರಾಮಾನುಜ ಶ್ರೀಶ ಸೇವಾ ಸಹಯೋಗದಲ್ಲಿ ಚೆಲುವನಾರಾಯಣಸ್ವಾಮಿ ಮುಂದೆ ಸಂಗೀತ–ನೃತ್ಯ ನೆರವೇರಿತು. ಕೊನೆಯ ದಿನದಂದು ರಾಧಿಕಾ ರಾಮಾನುಜಂ ಮತ್ತು ಮೃದಾಲ್ ರಾಮಾನುಜಂರಿಂದ ಭರತನಾಟ್ಯ ಸೇವೆ ಸಹ ಭಕ್ತಿಪೂರ್ವಕವಾಗಿ ನೆರವೇರಿತು. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಸೇರಿದಂತೆ ಅಪಾರ ಭಕ್ತರು ಪಲ್ಲವೋತ್ಸವ ಗರುಡವಾಹನೋತ್ಸವದಲ್ಲಿ ಭಾಗಿಯಾಗಿದ್ದರು.

ಅಪಘಾತದಲ್ಲಿ ಸತ್ತ ವ್ಯಕ್ತಿಯ ವಾರಸುದಾರರಿಗೆ ಪರಿಹಾರ ನೀಡದ ಕಾರಣ

ನ್ಯಾಯಾಲಯದಿಂದ ಕೆಎಸ್‌ಆರ್‌ಟಿಸಿ ಬಸ್ ಜಪ್ತಿ



ಪಾಂಡವಪುರ, ಜೂ.14– ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಕೋರ್ಟ್ ಆದೇಶಿಸಿದ ಪರಿಹಾರದ ಹಣವನ್ನು ನೀಡದ ಹಿನ್ನೆಲೆಯಲ್ಲಿ ಸಾರಿಗೆ ಬಸ್ ಜಪ್ತಿಮಾಡುವಂತೆ ಪಟ್ಟಣದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಆದೇಶಿಸಿದ ಹಿನ್ನೆಲೆಯಲ್ಲಿ ಬುಧವಾರ ಮಧ್ಯಾಹ್ನ ಸಾರಿಗೆ ಬಸ್ ಜಪ್ತಿಮಾಡಲಾಯಿತು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಕೆಎ–11, ಎಫ್–0281 ಸಾರಿಗೆ ಬಸ್ ಅನ್ನು ಅಧಿಕಾರಿಗಳು ಜಪ್ತಿ ಮಾಡಿ ಕೋರ್ಟ್ ಬಳಿ ತೆಗೆದುಕೊಂಡು ಹೋಗಿ ನಿಲ್ಲಿಸಿದರು.

2017ರಲ್ಲಿ ತಾಲೂಕಿನ ಚಿನಕುರಳಿ ಗ್ರಾಮದ ನಿವಾಸಿ ಜಯಮ್ಮ ಎಂಬುವರ ಪುತ್ರ ಮೊಗ್ಗಣ್ಣ ಎಂಬುವರು ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಸಾರಿಗೆ ಬಸ್ ಡಿಕ್ಕಿಹೊಡೆದು ಮೊಗ್ಗಣ್ಣ ಸಾವನ್ನಪ್ಪಿದ್ದ, ಈ ಪ್ರಕರಣ ಪಟ್ಟಣದ ಜೆಎಂಎಫ್‌ಸಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು. ಮೃತ ಮೊಗ್ಗಣ್ಣ ಅವರ ಪರವಾಗಿ ತಾಯಿ ಜಯಮ್ಮ ಅರ್ಜಿದಾರರಾಗಿದ್ದು, ಮೃತ ವ್ಯಕ್ತಿಯ ಪರವಾಗಿ ವಕೀಲ ಕೆ.ಕಾಳೇಗೌಡ ಅವರು ವಾದ ಮಂಡಿಸಿದ್ದರು. ಈ ಪ್ರಕರಣ ವಿಚಾರಣೆ ನಡೆದು 2021 ರಲ್ಲಿ ಪ್ರಕರಣ ಇತ್ಯರ್ಥವಾಗಿತ್ತು, ಮೃತ ವ್ಯಕ್ತಿಯ ವಾರಸುದಾರರಿಗೆ ಸಾರಿಗೆ ಇಲಾಖೆ 18 ಲಕ್ಷ ರೂ. ಪರಿಹಾರ ನೀಡುವಂತೆ ನ್ಯಾಯಾಲಯ ಆದೇಶಿಸಿತ್ತು. ಪರಿಹಾರ 18 ಲಕ್ಷ ಹಾಗೂ ಬಡ್ಡಿ ಹಣ ಸೇರಿ ಒಟ್ಟು 24,21,602 ನೀಡಬೇಕಾಗಿತ್ತು. ಆದೇಶವಾಗಿ ಇಷ್ಟು ವರ್ಷವಾದವರು ಸಹ 8 ಲಕ್ಷ ಮಾತ್ರ ಪರಿಹಾರ ಹಣ ನೀಡಿ ಉಳಿಕೆ ಹಣವನ್ನು ನೀಡಿರಲಿಲ್ಲ. ಕೋರ್ಟ್ ಆದೇಶಿಸಿದ್ದರೂ ಸಹ ಎರಡು ವರ್ಷವಾದರೂ ಸಹ ಪರಿಹಾರ ಹಣವನ್ನು ಪಾವತಿಸದ ಹಿನ್ನೆಲೆಯಲ್ಲಿ ಪಟ್ಟಣದ ಹಿರಿಯ ದರ್ಜೆ ಸಿವಿಲ್ ನ್ಯಾಯಾಧೀಶರಾದ ಮಂಜುನಾಥ್ ಅವರು ಸಾರಿಗೆ ಬಸ್ ಅನ್ನು ಜಪ್ತಿ ಮಾಡುವಂತೆ ಆದೇಶ ನೀಡಿದ್ದಾರೆ ಈ ಹಿನ್ನೆಲೆಯಲ್ಲಿ ವಕೀಲ ಕೆ.ಕಾಳೇಗೌಡರ ಜತೆಯಲ್ಲಿ ನ್ಯಾಯಾಲಯದ ಅಧಿಕಾರಿಗಳಾದ ಎಂ.ಸೂರ್ಯನಾರಾಯಣ, ಎಂ.ಪಿ.ತ್ರಿವೇಣಿ, ಜಿ.ಮನೋಹರ್, ಎಸ್.ಡಿ.ಆನಂದ್ ಅವರು ಬಸ್ ನಿಲ್ದಾಣ ದಲ್ಲಿ ನಿಂತಿದ್ದ ಕೆಎ–11, ಎಫ್–0281 ಸಾರಿಗೆ ಬಸ್‌ನ್ನು ಜಪ್ತಿ ಮಾಡಿದ್ದಾರೆ.

ನೀರು ಸರಬರಾಜಲ್ಲಿ ವ್ಯತ್ಯಯ

ಮಂಡ್ಯ, ಜೂ.14– ಮಂಡ್ಯ ನಗರದ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆ ಅಡಿ ಮಂಡ್ಯ ನಗರದ ಮಹಾವೀರ ವೃತ್ತದ ಸಮೀಪ 600 ಮಿ.ಮೀ ವ್ಯಾಸದ ಎಂ.ಎಸ್ ನೀರು ಸರಬರಾಜು ಕೊಳವೆ ಮಾರ್ಗದಲ್ಲಿ ಗಣನೀಯ ಪ್ರಮಾಣದಲ್ಲಿ ನೀರು ಸೋರುವಿಕೆ ಕಂಡು ಬಂದಿದ್ದು, ನೀರು ಸೋರುವಿಕೆ ತಡೆಗಟ್ಟಲು ಜೂನ್ 14 ರಂದು ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ನಗರದ ಸಾರ್ವಜನಿಕರಿಗೆ ಜೂನ್ 15 ಮತ್ತು 16 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ನೀರು ಬಂದಾಗ ಶೇಖರಿಸಿಕೊಂಡು ಜಲ ಮಂಡಳಿಯೊಂದಿಗೆ ಸಹಕರಿಸಬೇಕೆಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮಂಡ್ಯ ಉಪವಿಭಾಗದ ಸಹಾಯಕ ಕಾರ್ಯ ಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

IN THE HONOURABLE COURT OF SENIOR CIVIL JUDGE AT MADDUR

ORIGINAL SUIT NO:246/2022

Between: Shri.Kiran kumar. B S/o Shri.Byrappa, Aged about 32 years, Residing at Door No:994/4, 5th cross, Yaraganahalli, Mysuru-570011. **AND** Shri. Yogananda Son of late Shri.S.K. Kenchaiah, Major, aged about 74 years, Residing at Door No:536, Somanahalli village, Kasaba hobli, Maddur Taluk, Mandya District.

COURT NOTICE

Whereas, the plaintiff has instituted the above original suit against you for the relief of Specific Performance of Contract and allied reliefs on the file of the Hon'ble Additional Senior Civil Judge Court at Maddur. You are hereby summoned to appear in this Court in person or by a pleader on the 30th day of 06, 2023 at 11 'O' clock, to answer the same failing which he Original Suit will be disposed of ex-parte. Given under my hand and the seal of the court, this 14 day 06, 2023.

SCHEDULE PROPERTY

All that part and parcel of Mangaluru tiled House bearing E property No.152100204000101312 having Old Khatha No.750/306/A, situated at Somanahalli Gramatana, Somanahalli Gramapanchyathi, Kasaba Hobli, Maddur Taluk, Mandya District and bounded: On the East by: Vacant site of S.K.Viswanath and S.K.Mallesh, On the West by : Own Passage and Property of S.M.Appaji, On the North by :Residential House of S.K.Vishwanath, On the South by :Residential House of S.K.Thulasiram

By Order of the Court
Sd/- Chief Administrative Officer
Court of the Additional Senior Civil Judge,
Maddur 14/6/2023.

ಶಾಸಕ ತನ್ವೀರ್‌ಸೇಠ್‌ಗೆ ಬ್ಲಾಕ್ ಕಾಂಗ್ರೆಸ್ ಅಭಿನಂದನೆ

ಕಾಂಗ್ರೆಸ್ ಗ್ಯಾರಂಟಿ ಮನೆ ಮನೆಗೆ ತಲುಪಿಸುವಂತೆ ತನ್ವೀರ್ ಕರೆ



ವಿದ್ಯುತ್ ಬೆಲೆ ಏರಿಕೆ ಮಾಡಿದ್ದು ಬಿಜೆಪಿ...

ರಾಜ್ಯ ವಿಧಾನಸಭಾ ಚುನಾವಣೆ ಹೊಸ್ತಿಲಿನಲ್ಲಿ ವಿದ್ಯುತ್ ದರ ಪರಿಶೀಲನೆ ಮಾಡುವಂತೆ ಕೆಇಆರ್‌ಸಿ(ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್)ಗೆ ಸೂಚನೆ ನೀಡಿದ ಅಂದಿನ ಬಿಜೆಪಿ ಸರ್ಕಾರ ಜನಪರ ಕಾಳಜಿಯುಳ್ಳ ಯಾವ ಸರ್ಕಾರವೂ ಮಾಡದ ತಪ್ಪನ್ನು ಮಾಡಿದೆ. ಇದರಿಂದ ಕಾಂಗ್ರೆಸ್ ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ. ಆದ್ದರಿಂದ ವಿದ್ಯುತ್ ದರದಲ್ಲಿ ಏರಿಕೆ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು ಎಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ.

– ತನ್ವೀರ್ ಸೇಠ್, ಶಾಸಕ ಎನ್.ಆರ್.ಕ್ಷೇತ್ರ

ಮೈಸೂರು, ಜೂ.14(ಎಂಕೆ)– ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಸತತ 6ನೇ ಬಾರಿಗೆ ಶಾಸಕರನ್ನಾಗಿ ಆಯ್ಕೆ ಮಾಡಿದ ಮತದಾರರಿಗೆ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಮುಖಂಡರಿಗೆ ಧನ್ಯವಾದ ತಿಳಿಸಿದ ಶಾಸಕ ತನ್ವೀರ್ ಸೇಠ್, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಭರವಸೆ ಮೂಡಿಸುವ ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮಿಲನ್ ಫಂಕ್ಷನ್ ಹಾಲ್‌ನಲ್ಲಿ ಎನ್.ಆರ್.ಕ್ಷೇತ್ರದ ಅಜೀಜ್ ಸೇಠ್ ಬ್ಲಾಕ್ ಹಾಗೂ ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಅಭಿನಂದನೆ ಹಾಗೂ ಕೃತಜ್ಞತಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಕುರಿತು ವಿರೋಧ ಪಕ್ಷದವರು ಟೀಕೆ ಮಾಡುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್‌ನ ಪ್ರತಿಯೊಬ್ಬ ಕಾರ್ಯಕರ್ತ ಮನೆ ಮನೆಗೆ ಭೇಟಿ ನೀಡಿ, ಗ್ಯಾರಂಟಿ ಕಾರ್ಯಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಡುವ ಮೂಲಕ ಸರ್ಕಾರದ ಮೇಲಿನ ವಿಶ್ವಾಸವನ್ನು ಹೆಚ್ಚಿಸಬೇಕು ಎಂದು ಕರೆ ನೀಡಿದರು.

ಗೃಹಲಕ್ಷ್ಮಿ ಯೋಜನೆ ಕುರಿತು ನಕಲಿ ಅರ್ಜಿಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಆದರೆ ಜೂ.15ರ ನಂತರ ವಷ್ಟೇ ಸರ್ಕಾರದಿಂದ ಅಧಿಕೃತವಾಗಿ ಅರ್ಜಿ ಹೊರಬರಲಿದೆ. ಕೆಲವರು ಅರ್ಜಿ ಹಾಕಿಕೊಡುತ್ತೇವೆಂದು ಹೇಳಿ ಹಣ ವಸೂಲಿ ಮಾಡುತ್ತಿದ್ದಾರೆ. ಆದ್ದರಿಂದ ನಮ್ಮಲ್ಲಿರುವ ಸ್ತ್ರೀ–ಶಕ್ತಿ ಸಂಘ–ಸಂಸ್ಥೆಗಳು ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಕುರಿತು ಮಾಹಿತಿ ನೀಡುವ ಮೂಲಕ ಯಾರೂ ಮೋಸ ಹೋಗದಂತೆ ಎಚ್ಚರಿಸಬೇಕು. ಬಡವರಿಗೆ ಹಣ ನೀಡಿದರೆ ಅವರು, ಕೂಡಿಡುವುದಿಲ್ಲ. ಬದಲಿಗೆ ತಮ್ಮ ಅಗತ್ಯಗಳಿಗೆ ಖರ್ಚು ಮಾಡುತ್ತಾರೆ. ಈ ರೀತಿ ಹಣಕಾಸಿನ ವ್ಯವಹಾರ ಹೆಚ್ಚಾಗುತ್ತದೆ. ಸರ್ಕಾರಕ್ಕೂ ಆದಾಯ ಬರುತ್ತದೆ ಎಂಬ ಉದ್ದೇಶದಿಂದ ಬಡವರಿಗಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು.

ಪದವಿ ಹಾಗೂ ಡಿಪ್ಲೊಮಾ ಮುಗಿಸಿದವರಿಗೆ ಮಾಸಿಕ ಭತ್ಯೆ ನೀಡುವ ಸಂಬಂಧ ಅರ್ಹ ಫಲಾನುಭವಿಗಳಿಗೆ ಯಾವುದೇ ಗೊಂದಲಗಳು ಉಂಟಾಗದಂತೆ ಯೂತ್ ಕಾಂಗ್ರೆಸ್ ಹಾಗೂ ಎನ್‌ಎಸ್‌ಯುಐ ಅನುಕೂಲ ಮಾಡಿಕೊಡಬೇಕು. ವಿಶ್ವವಿದ್ಯಾನಿಲಯಗಳು ಹಾಗೂ ಡಿಪ್ಲೊಮಾ ಕಾಲೇಜುಗಳಲ್ಲಿ ತೇರ್ಗಡೆ ಹೊಂದಿದವರ ಮಾಹಿತಿ ಪಡೆದು ಅವರಿಗೆ ಮಾಸಿಕ ಭತ್ಯೆ ಲಭ್ಯವಾಗುವುದಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಹೊರಗಿನಿಂದ ಬಂದವರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ನನ್ನ ವಿರುದ್ಧ ಸ್ಪರ್ಧಿಸಿದ್ದ ಎರಡು ಪಕ್ಷದ ಪ್ರತಿಸ್ಪರ್ಧಿಗಳು ಕ್ಷೇತ್ರದವರೇ ಅಲ್ಲ. ಹೊರಗಿನಿಂದ ಬಂದವರು. ಕ್ಷೇತ್ರದಲ್ಲಿ ಯಾವ ಅಭಿವೃದ್ಧಿಯಾಗಿದೆ ಎಂದು ಪ್ರಶ್ನಿಸುತ್ತಾರೆ. ಇಲ್ಲಿನವರಾಗಿದ್ದರೆ ಅಭಿವೃದ್ಧಿ ಬಗ್ಗೆ ತಿಳಿದಿರುತ್ತಿತ್ತು ಎಂದು ಕುಟುಕಿದ ತನ್ವೀರ್ ಸೇಠ್, ಅಭಿವೃದ್ಧಿ ಎಂಬುದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಒಮ್ಮೆ ರಸ್ತೆ ಡಾಂಬರೀಕರಣವಾದರೆ ಮುಗಿಯುವುದಿಲ್ಲ. ಮತ್ತೆ ಮತ್ತೆ ಮಾಡುತ್ತಿರಬೇಕು. ನಾವು ಸೇವೆ ಮಾಡಲು ಬಂದವರು. ಕ್ಷೇತ್ರದ ಜನತೆಯ ಸೇವೆಯೇ ನಮಗೆ ಮುಖ್ಯವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಅಯೂಬ್ ಖಾನ್, ಸಾಹುಕಾರ್ ಚೆನ್ನಯ್ಯ ಬ್ಲಾಕ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಸೈಯದ್ ಇಕ್ಬಾಲ್, ನಗರ ಪಾಲಿಕೆ ಸದಸ್ಯರು, ಮಾಜಿ ಸದಸ್ಯರು, ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಷರತ್ತಿಲ್ಲದೆ ಗ್ಯಾರಂಟಿ ಯೋಜನೆ ಜಾರಿಗೆ ತರಬೇಕು

ಸರ್ಕಾರಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಸಲಹೆ



ದಾವಣಗೆರೆ, ಜೂ.14– ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆ ಬಗ್ಗೆ ಮಾತನಾಡಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಚುನಾವಣೆಗೂ ಮುನ್ನ ಗ್ಯಾರಂಟಿ ಘೋಷಣೆ ಮಾಡಿ ಅಧಿಕಾರಕ್ಕೆ ಬಂದ ಮೇಲೆ ಕೊಡಲೇಬೇಕು. ಆದರೆ ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳಬಾರದು ಎಂದು ಹೇಳಿದರು.

ದಾವಣಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರಿಗೆ ಗ್ಯಾರಂಟಿ ಭರವಸೆ ಕೊಟ್ಟ ಮೇಲೆ ಈಗ ಕೊಡಲೇಬೇಕು. ಈಗ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಜಾರಿಗೆ ತಂದಿಲ್ಲವೇ ಹಾಗೆ ಉಳಿದ ಯೋಜನೆಗಳನ್ನು ಷರತ್ತಿಲ್ಲದೆ ಜಾರಿಗೆ ತರಬೇಕು. ಮಾತು ಕೊಟ್ಟಂತೆ ಸರ್ಕಾರ ನಡೆದುಕೊಳ್ಳಬೇಕು ಎಂದರು. ಇದೇ ವೇಳೆ ವಿದ್ಯುತ್ ದರ ಹೆಚ್ಚಳದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ವಿದ್ಯುತ್ ದರ ಹೆಚ್ಚಳದಿಂದಾಗಿ ರಾಜ್ಯದಲ್ಲಿ ಕೈಗಾರಿಕೆಗಳು ಉಳಿಯುವುದು ಕಷ್ಟವಾಗಿದೆ. ಹಿಂದಿನ ವಿದ್ಯುತ್ ದರವನ್ನೇ ಮುಂದುವರೆಸಬೇಕು ಎಂದರು.

ಇಂದು ಆ್ಯಪಲ್ ಲ್ಯಾಬ್ ಉದ್ಘಾಟನೆ

ಮಂಡ್ಯ, ಜೂ.14– ಮಂಡ್ಯ ವಿಶ್ವವಿದ್ಯಾಲಯದಲ್ಲಿ ಆ್ಯಪಲ್ ಲ್ಯಾಬ್ ಉದ್ಘಾಟನಾ ಸಮಾರಂಭವು ಜೂ.15 ಬೆಳಗ್ಗೆ 11 ಗಂಟೆಗೆ ವಿವಿಯ ಗ್ರಂಥಾಲಯದಲ್ಲಿ ನೆರವೇರಲಿದೆ.

ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಉದ್ಘಾಟನೆ ಮಾಡಲಿದ್ದು, ಮಂಡ್ಯ ವಿವಿ ಕುಲಪತಿ ಡಾ.ಪುಟ್ಟರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜೀವ್ ಪಿ. ಫಣೀಂದ್ರ್ ಭಾಗವಹಿಸಲಿದ್ದು, ವಿವಿಯ ಆಡಳಿತ ಕುಲಸಚಿವ ಡಾ. ನಾಗರಾಜ್ ಜೆ.ಚೋಳ್ಳಿ, ಮೌಲ್ಯಮಾಪನ ಕುಲಸಚಿವ ಡಾ.ರಂಗರಾಜು ಎಚ್.ಜೆ, ಉಪ ಕುಲಸಚಿವ ಡಾ.ಪಾರ್ಥ ಟಿ ಉಪಸ್ಥಿತರಿರಲಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಕಾರು ಚಾಲಕ ಬೇಕಾಗಿದ್ದಾರೆ
ಲೈಸೆನ್ಸ್ (ಪರವಾನಗಿ) ಹೊಂದಿರುವ ಮೈಸೂರು ಮತ್ತು ಬೆಂಗಳೂರಿನಲ್ಲಿ ಚಾಲನೆ ಮಾಡಿರುವ ಕನಿಷ್ಠ 5 ವರ್ಷ ಅನುಭವವುಳ್ಳ ಕಾರು ಚಾಲಕ ಬೇಕಾಗಿದ್ದಾರೆ. ಮೊಬೈಲ್ ಸಂಖ್ಯೆ ಜೊತೆಗೆ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಹಿಂದೂಸ್ಥಾನ್ ಸ್ಪ್ರಿಂಗ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ.
ನಂ.ಪಿ–111/112, ಇಂಡಸ್ಟ್ರಿಯಲ್ ಎಸ್ಟೇಟ್, ಯಾದವಗಿರಿ, ಮೈಸೂರು–570020
e-mail id: springsbil@gmail.com.
Mob: 9148998772

ಮನೆ ಮಾರಾಟಕ್ಕಿದೆ
(24x45)
ಪರುಶುರಾಮ ದೇವಸ್ಥಾನ ರಸ್ತೆ, ಹಳ್ಳದಕೇರಿ, ಸಪ್ತಸ್ವರ ನಿಲಯ, ನಂಜನಗೂಡು. ಮುತ್ತುರಾಜ್
9964763172

ಕಳೆದಿದೆ
ಫ್ಲಾಟ್ ಸಂಖ್ಯೆ 201, ಪ್ರಿಯದರ್ಶಿನಿ ಅಪಾರ್ಟ್‌ಮೆಂಟ್ (ಸೈಟ್ ಸಂಖ್ಯೆ 639), ಹೈದರ್ ಅಲಿ ರಸ್ತೆ, ಇದಕ್ಕೆ ಸಂಬಂಧಿಸಿದ ಸೇಲ್ ಡೀಡ್ ಸಂಖ್ಯೆ 5354 DTD 12–10–2001 (ಮೈಸೂರು ಉತ್ತರ) ಈ ದಾಖಲೆಯು ತಾರೀಖು 30–03–2023ರಂದು ಮೈಸೂರು ದಕ್ಷಿಣ ನೋಂದಣಿ ಕಚೇರಿ ಹಾಗೂ ಲಕ್ಷ್ಮೀಪುರಂ ನಡುವೆ ಕಳೆದು ಹೋಗಿದೆ. ಸಿಕ್ಕಿದವರು ಫೋನ್ ಸಂಖ್ಯೆ 9483514648ಕ್ಕೆ ಕರೆ ಮಾಡಿದರೆ ಸೂಕ್ತ ಬಹುಮಾನ ನೀಡಲಾಗುತ್ತದೆ.
– ಗೋವಿಂದರಾಜು ಜಿ.ಎಸ್, ಮಾಲೀಕರು

OPENING AT MYSORE
Maroor Motors
Authorized Distributor for Maruti Suzuki Genuine Parts Required Counter Executive For our Mysore Wearhouse Minimum 1 year Experience in Automobile Sectore. Call/Whatsapp
7259026333
email:hrmaroor@gmail.com

ಹೊಸ ಮನೆ ಬಾಡಿಗೆಗೆ ದೊರೆಯುತ್ತದೆ
30x40, 2BHK, Ground Floor, Fully Furnished house, Near ring Road, Manasi Nagar, Mysore
9980658699

WANTED TECHERS/ LECTURER
1) Wanted a qualified English Teacher for an Aided High School (Ability to Speak in Hindi / Urdu, Preferred)
2) Wanted a physics Lecturer for an Unaided PU College.
8861531919

ಬೇಕಾಗಿದ್ದಾರೆ
ತೋಟದಲ್ಲಿ ಉಳಿದುಕೊಂಡು ಕೆಲಸ ಮಾಡುವ ಕೆಲಸಗಾರರು ಬೇಕಾಗಿದ್ದಾರೆ
WANTED ROOM BOYS FOR HOSTEL
9743221781/82
8050936432

WANTED
We require ITI Turner, Fitter, and Diploma in Mechanical, Preferably Female
0821-2582668,7204445679
Address: MYSTECH MACHINES # Q113, 4th Cross, 8th Main, Hebbal Industrial Estate, Mysore-570016

ಬೇಕಾಗಿದ್ದಾರೆ
ವಿವಿಧ ಸಂಸ್ಥೆ ಮತ್ತು ಆಫೀಸ್‌ಗಳಿಗೆ,
1. ಫೀಲ್ಡ್ ಆಫೀಸರ್ / ಮಾರ್ಕೆಟಿಂಗ್
2. ಆಫೀಸ್ ಅಸಿಸ್ಟೆಂಟ್ (ಡಿಗ್ರಿ, MS world, MS Excel, Computer).
3. ಸೆಕ್ಯೂರಿಟಿ ಗಾರ್ಡ್ (ವಯಸ್ಸು 25 – 55 ಮಾತ್ರ)
4. ಹೌಸ್‌ಕೀಪಿಂಗ್ (ಮಹಿಳೆ ಮತ್ತು ಪುರುಷರು)
ಮೈಸೂರು ಸಿಟಿ ಹಾಗೂ ಸುತ್ತಮುತ್ತನವರಿಗೆ ಆದ್ಯತೆ.
9036745292
(ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ)

AFFIDAVIT
I, M.S. Chirasya, D/o M.G Sudeep, residing at D.No. 876/6, V.V. Road, Lakshmipuram, Mysore-570 004, that in my educational records my father and mother name mentioned as M.G Sudeep & Nandini S.R., but in my passport my father and mother name has been wrongly mentioned as Sudeep & Nandini. I further swear in front of Notary R.K. Jyothi on 14-6-2023, that my father and mother correct name is M.G. Sudeep & Nandini S.R.
Sd/- M.S. Chirasya

ಶಿಕ್ಷಕಿಯರು ಬೇಕಾಗಿದ್ದಾರೆ
MSc, BSc, BEd, DEd ತರಬೇತಿ ಹೊಂದಿರುವ ಶಿಕ್ಷಕಿಯರು ಬೇಕಾಗಿದ್ದಾರೆ
ರಾಹುಲ್ ನರ್ಸರಿ ಹಾಗೂ ಹಿರಿಯ ಪ್ರಾಥಮಿಕ ಶಾಲೆ, ಮಹದೇವಪುರ, ಜೆ.ಪಿ.ನಗರ ಹತ್ತಿರ, ಮೈಸೂರು
9743344778
6360797893

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಲೇಡಿಸ್ ಬೇಕಾಗಿದ್ದಾರೆ. ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ, ಅಕ್ಬರ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು
9036890169
9739192911

LAXURIOUS HOUSE FOR SALE
Vijayanagar 1st Stage 40x60 East Face 4 BHK with Gym, Home Theater, Private Office and 2 Car Parking Space
8217538285
8951975104

ಸೈಟು ಮಾರಾಟಕ್ಕಿದೆ
ಡಿಟಿಸಿಪಿ ಅಪ್ರೂವ್ಡ್, 9 & 11ಎ ಖಾತೆ, 30X40, 18 ಲಕ್ಷದ 60ಸಾವಿರ, ಬ್ಯಾಂಕ್ ಲೋನ್ ದೊರೆಯುತ್ತದೆ. ಮಾಲೀಕರಿಂದ ನೇರವಾಗಿ ಮಾರಾಟ
ಮೈಸೂರು –ಬನ್ನೂರು ರಸ್ತೆ
9945558166

WANTED TEACHERS
MA/B.A, B.Ed. (English Major)
B.A. B.P.Ed/ PUC, CP.Ed.
NST/ Montessari
* English Fluency is Must
* Lady Candidates Preferable
9901670090
9945640116

ಟೆಲಿಕಾಂ ಲೇಔಟ್
30x40 N/F ಸೈಟು @ Rs.25 ಲಕ್ಷ
ತಕ್ಷಣ ಮನೆ ಕಟ್ಟಬಹುದು. ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ, ಮೈಸೂರು
9538583377

2 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ
365 ದಿನ ಕಾವೇರಿ ನೀರಿನ ಹರಿವು ಇರುತ್ತದೆ ಸ್ಥಳ: ಚಿಕ್ಕಪಾಳ್ಯ ಗ್ರಾಮ, ಶ್ರೀರಂಗಪಟ್ಟಣ ತಾ॥ ಮಂಡ್ಯ ಜಿಲ್ಲೆ (ಕರೀಘಟ್ಟ ಹತ್ತಿರ), ಶ್ರೀರಂಗಪಟ್ಟಣದಿಂದ 9 ಕಿ.ಮೀ ದೂರದಲ್ಲಿದೆ. ದರ ಎಕರೆಗೆ 36 ಲಕ್ಷ (ನೆಗೋ) ಆಸಕ್ತ ಗ್ರಾಹಕರು ಮಾತ್ರ ಸಂಪರ್ಕಿಸಿ:ಪುಟ್ಟೇಗೌಡ/ವಸಂತ
8861090994,8123666814

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ
Akbar Road
Near Ashoka Road
(ಸಂಬಳ 6000 ರಿಂದ 8000)
ಸಮಯ: 10 am to 7 pm
9916459786

ಮೈಸೂರು ಮೃಗಾಲಯದಲ್ಲಿ ಶಿಶು ಆರೈಕೆ ಕೇಂದ್ರ ಲೋಕಾರ್ಪಣೆ

- ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಅವರಿಂದ ಚಾಲನೆ
- ನವಜಾತ ಶಿಶುಗಳೊಂದಿಗೆ ಬರುವ ಪ್ರವಾಸಿಗರಿಗೆ ವರದಾನ
- ಅಮಿಟಿ ಲೇಡಿಸ್ ಕ್ಲಬ್‌ನಿಂದ ಹೊಸ ಯೋಜನೆ



ಮೈಸೂರು,ಜೂ.14(ಎಂಟಿವೈ)– ದೇಶದ ಮುಂಚೂಣಿ ಮೃಗಾಲಯಗಳಲ್ಲಿ ಒಂದಾಗಿರುವ ಮೈಸೂರು ಮೃಗಾಲಯದಲ್ಲಿ ನವಜಾತ ಶಿಶುಗಳ ಆರೈಕೆ ಕೇಂದ್ರವನ್ನು ಲೋಕಾರ್ಪಣೆ ಮಾಡಲಾಯಿತು.

ನವಜಾತ ಶಿಶುಗಳೊಂದಿಗೆ ಮೃಗಾಲಯಕ್ಕೆ ಬರುವ ಮಹಿಳೆಯರ ಅನುಕೂಲಕ್ಕಾಗಿ ಸಮಾಜ ಸೇವಾಕಾರ್ಯದಡಿ ಮೈಸೂರು ಅಮಿಟಿ ಲೇಡಿಸ್ ಸರ್ಕಲ್–108 ಸಂಸ್ಥೆ ನಿರ್ಮಿಸಿರುವ ಶಿಶು ಆರೈಕೆ ಕೇಂದ್ರವನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ದಂಪತಿ ಪ್ರವಾಸಿಗರಿಗೆ ಸೇವೆ ಸಮರ್ಪಿಸಿದರು.

ಈ ಕೇಂದ್ರದಲ್ಲಿ ತಾಯಂದಿರು ನವಜಾತ ಶಿಶುಗಳಿಗೆ ಹಾಲುಣಿಸಲು ಬೇಕಾದ ವ್ಯವಸ್ಥೆ ಮಾಡಲಾಗಿದೆ. ಮಕ್ಕಳಿಗೆ ಡೈಪರ್ ಬದಲಾಯಿಸಲು, ಊಟ ಮಾಡಿಸಲು ಟೇಬಲ್ ಸೇರಿದಂತೆ ಹಲವಾರು ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಅರಸರ ಕೊಡುಗೆ: ಶಿಶು ಆರೈಕೆ ಕೇಂದ್ರ ಉದ್ಘಾಟಿಸಿ ಮಾತನಾಡಿದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ಮೃಗಾಲಯಕ್ಕೆ ಭವ್ಯ ಇತಿಹಾಸವಿದೆ. ರಾಜರ ಆಳ್ವಿಕೆ ಕಾಲದಿಂದಲೂ ಪ್ರಾಣಿ–ಪಕ್ಷಿಗಳ ಪಾಲನೆಗೆ ವ್ಯವಸ್ಥೆ ಮಾಡಲಾಗಿತ್ತು. ವಿವಿಧೆಡೆಯಿಂದ ಮೈಸೂರಿಗೆ ಬರುತ್ತಿದ್ದ ರಾಯಭಾರಿಗಳು ಮೈಸೂರು ಅರಸರಿಗೆ ವಿವಿಧ ಪ್ರಾಣಿಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರು. ರಾಯಭಾರಿಗಳು ನೀಡಿದ್ದ ಪ್ರಾಣಿಗಳನ್ನು ಆರೈಕೆ ಮಾಡುತ್ತಿದ್ದ ಸ್ಥಳವೇ ಮೃಗಾಲಯವಾಗಿದೆ. ಮೈಸೂರು ರಾಜಮನೆತನದ 10ನೇ ಚಾಮರಾಜ ಒಡೆಯರ್ ಕಾಲದಲ್ಲಿ ಒಂದು ಭಾಗವನ್ನು 1897ರಲ್ಲಿ ಮೃಗಾಲಯವಾಗಿ ಪರಿವರ್ತಿಸಲಾಯಿತು. ಪ್ರವಾಸೋದ್ಯಮ ಹಾಗೂ ಸಾರ್ವಜನಿಕರ ಮನರಂಜನೆಗಾಗಿ ಅಂದು ಸ್ಥಾಪಿಸಿದ ಮೃಗಾಲಯವನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರ್ಕಾರಗಳು ಮುಂದುವರೆಸಿಕೊಂಡು ಹೋಗುತ್ತಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ದೇಶದ ಎರಡನೇ ಮೃಗಾಲಯ ಎಂಬ ಕೀರ್ತಿ ಮೈಸೂರು ಮೃಗಾಲಯಕ್ಕೆ ಇದೆ. ಈಗಾಗಲೇ ಸ್ವಚ್ಛ ಹಾಗೂ ಸುಂದರ ವಾತಾವರಣದಿಂದ ಇರುವ ಮೈಸೂರು ಮೃಗಾಲಯವನ್ನು ದೇಶದ ನಂಬರ್–1 ಮೃಗಾಲಯ ಮಾಡುವ ನಿಟ್ಟಿನಲ್ಲಿ ಸಿಬ್ಬಂದಿಗಳು ಶ್ರಮಿಸುತ್ತಿದ್ದು, ಅದಕ್ಕೆ ಎಲ್ಲರ ಸಹಕಾರವೂ ಅಗತ್ಯವಾಗಿದೆ. ಮೃಗಾಲಯಕ್ಕೆ ಬರುವ ಚಿಕ್ಕ ಮಕ್ಕಳೊಂದಿಗೆ ಬರುವ ಪೋಷಕರಿಗೆ ನೆರವಾಗುವ ನಿಟ್ಟಿನಲ್ಲಿ ಅಮಿಟಿ ಲೇಡಿಸ್ ಸರ್ಕಲ್–108 ಸಂಸ್ಥೆ ಶಿಶುಗಳ ಪಾಲನಾ ಕೇಂದ್ರ ಸ್ಥಾಪಿಸಿರುವುದು ಶ್ಲಾಘನೀಯ. ಇಂತಹ ಕೆಲ ವ್ಯವಸ್ಥೆ ಕಲ್ಪಿಸುವುದರಿಂದ ಮೃಗಾಲಯಕ್ಕೆ ಬರುವ ಪ್ರವಾಸಿಗರಿಗೆ ಅನುಕೂಲವಾಗುವುದರೊಂದಿಗೆ ದೇಶದ ಅತ್ಯುತ್ತಮ ಮೃಗಾಲಯ ಎಂಬ ಸ್ಥಾನ ಪಡೆಯಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಅಮಿಟಿ ಲೇಡಿಸ್ ಸರ್ಕಲ್ 108 ಅಧ್ಯಕ್ಷೆ ಅಪರ್ಣಾ ರಂಗ ಮಾತನಾಡಿ, ಈ ಹಿಂದೆ ನಾವು ಮೃಗಾಲಯಕ್ಕೆ ಬಂದಿದ್ದಾಗ, ಇಲ್ಲಿನ ಅಧಿಕಾರಿಗಳು ಶಿಶು ಆರೈಕೆ ಕೇಂದ್ರದ ಅವಶ್ಯಕತೆ ಇರುವುದನ್ನು ನಮ್ಮ ಗಮನಕ್ಕೆ ತಂದಿದ್ದರು. ಮೃಗಾಲಯಕ್ಕೆ ಬರುವ ಪ್ರವಾಸಿಗರಲ್ಲಿ ಕೆಲವರು ಮಕ್ಕಳಿಗೆ ಹಾಲುಣಿಸಲು ಸಮೀಪದ ಹೋಟೆಲ್‌ಗೆ ಹೋಗುತ್ತಿದ್ದಾರೆ ಎಂಬ ಮಾಹಿತಿ ದೊರೆಯಿತು. ಇದರಿಂದ ನಮ್ಮ ಸಂಸ್ಥೆ ವತಿಯಿಂದ ಅಗತ್ಯವಾದ ಶಿಶು ಪಾಲನಾ ಕೇಂದ್ರ ನಿರ್ಮಾಣಕ್ಕೆ ಆದ್ಯತೆ ನೀಡಿ, ಮೂರು ತಿಂಗಳ ಹಿಂದಷ್ಟೇ ಕಾಮಗಾರಿ ಆರಂಭಿಸಿ, ಇದೀಗ ಪೂರ್ಣಗೊಳಿಸಿ ಜನಸೇವೆಗೆ ಒಪ್ಪಿಸಲಾಗಿದೆ ಎಂದರು. ಮೃಗಾಲಯದ ಪ್ರಭಾರ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಮಾತನಾಡಿ, ಮೈಸೂರು ಮೃಗಾಲಯ ಬರುವ ಪ್ರವಾಸಿಗರಿಗೆ ನೆರವಾಗುವ ನಿಟ್ಟಿನಲ್ಲಿ ಈಗಾಗಲೇ ಹಲವು ಸೌಲಭ್ಯವನ್ನು ಕಲ್ಪಿಸಲಾಗಿದೆ. ಶಿಶುಪಾಲನಾ ಕೇಂದ್ರದ ಅವಶ್ಯಕತೆ ಇದ್ದುದ್ದನ್ನು ಮನಗಂಡು ಅಮಿಟಿ ಲೇಡಿಸ್ ಸರ್ಕಲ್–108 ಸಂಸ್ಥೆ ನೂತನ ಕೇಂದ್ರವನ್ನು ನಿರ್ಮಿಸಿಕೊಟ್ಟಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೃಗಾಲಯದ ಉಪನಿರ್ದೇಶಕಿ ರೋಶನಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಎಸ್.ಸಿ.ಬಸವರಾಜುಗೆ ಎಂಎಲ್‌ಸಿ ಸ್ಥಾನ ನೀಡಿ



ಮೈಸೂರು,ಜೂ.14(ಪಿಎಂ)– ನಾಯಕ ಸಮುದಾಯದ ಹಿರಿಯ ಮುಖಂಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು ಅವರನ್ನು ಜೂ.30ರಂದು ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಮಾಡಬೇಕೆಂದು ಕರ್ನಾಟಕ ರಾಜ್ಯ ನಾಯಕರ ಯುವಸೇನೆ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಯುವಸೇನೆಯ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು, ಪರಿಶಿಷ್ಟ ಪಂಗಡದ ನಾಯಕ ಸಮುದಾಯಕ್ಕೆ ಸೇರಿದ ಎಸ್.ಸಿ.ಬಸವರಾಜು ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿಯಾಗಿ ಪಕ್ಷ ಸಂಘಟನೆಗೆ ಶ್ರಮಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬೆಂಬಲಿಗರಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದರು.

ಮೈಸೂರು ಭಾಗದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳಿಸಲು ಇವರೂ ಶ್ರಮಿಸಿದ್ದಾರೆ. ಪಕ್ಷದ ಪರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಬಸವರಾಜು ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ಕಲ್ಪಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಮನವಿ ಮಾಡಲಾಗುವುದು ಎಂದರು.

ಸಂಘಟನೆಯ ರಾಜ್ಯ ಉಪಾಧ್ಯಕ್ಷ ಶಿವಕುಮಾರ್, ಜಿಲ್ಲಾಧ್ಯಕ್ಷ ಉದ್ಬೂರು ಸೋಮಣ್ಣ, ಉಪಾಧ್ಯಕ್ಷ ಕಣಿಯನಹುಂಡಿ ಸಿದ್ದರಾಜು, ಸಂಘಟನಾ ಕಾರ್ಯದರ್ಶಿ ಸೋಮೇಶ್ವರಪುರ ನಾರಾಯಣ, ಗೌರವ ಸಲಹೆಗಾರ ಪರಶಿವಮೂರ್ತಿ ಗೋಷ್ಠಿಯಲ್ಲಿದ್ದರು.


ಜೂ.21ರವರೆಗೆ ಉಚಿತ ಯೋಗ ಶಿಬಿರ



ಮೈಸೂರು, ಜೂ.14 (ಪಿಎಂ)– ಆರ್ಟ್ ಆಫ್ ಲಿವಿಂಗ್ ಆಶ್ರಮದ ವತಿಯಿಂದ ಜೂ.21ರವರೆಗೆ ಮೈಸೂರಿನ ಎರಡು ಸ್ಥಳಗಳಲ್ಲಿ ಉಚಿತ 'ಶ್ರೀ ಶ್ರೀ ಯೋಗ' ಶಿಬಿರ ಆಯೋಜಿಸಲಾಗಿದೆ ಎಂದು ಆಶ್ರಮದ ಯೋಗ ಶಿಕ್ಷಕ ರವಿಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗ ಶಿಬಿರ ಆರಂಭವಾಗಿದ್ದು, ಲಲಿತಾದ್ರಿಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಆಶ್ರಮ ಹಾಗೂ ಚಾಮುಂಡಿಪುರಂನ 1ನೇ ಮೇನ್‌ನ 4ನೇ ಕ್ರಾಸ್‌ನ ನಂ.2870ರ ವಜ್ರನಖ ಎಂಬ ನಿವಾಸದ ಆವರಣದಲ್ಲಿ ಬೆಳಗ್ಗೆ 6ರಿಂದ 7ರವರೆಗೆ ಈ ಯೋಗ ಶಿಬಿರ ನಡೆಯಲಿದೆ ಎಂದರು. ದೇಹ ಮತ್ತು ಮನಸ್ಸು ಹಗುರವಾಗಬೇಕು. ಅದೇ ನಿಜವಾದ ಯೋಗ. ಶಿಬಿರದಲ್ಲಿ ಪ್ರಾಚೀನ ಗ್ರಂಥಗಳಿಂದ ಆಧಾರಿತವಾದ ಯೋಗವನ್ನು ಒಂದು ಸಮಗ್ರ ವಿಜ್ಞಾನವನ್ನಾಗಿ ಪರಿಗಣಿಸಿ ಯೋಗಾಭ್ಯಾಸ ಕಲಿಸಿಕೊಡಲಾಗುವುದು. ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವವರು ಮೊ.ಸಂ. 98455 20617 ಸಂಪರ್ಕಿಸಬಹುದು ಎಂದರು. ಆಶ್ರಮದ ಸದಸ್ಯರಾದ ವೀಣಾ, ಗೌತಮ್, ಕರ್ನಲ್ ಬಿ.ಎಸ್.ಗೋಕುಲ್, ಲಿಂಗರಾಜು, ಶ್ರೀಧರ್ ಗೋಷ್ಠಿಯಲ್ಲಿದ್ದರು.

ಉಚಿತ ಬಸ್ ಪ್ರಯಾಣ: ರೈಲಿನಲ್ಲೂ ಪ್ರಯಾಣಿಕರ ಸಂಖ್ಯೆ ಇಳಿಮುಖ



ಮೈಸೂರು ಜೂ.14 (ಬಿಎಲ್‌ಯು)– ಕಾಂಗ್ರೆಸ್ ಸರ್ಕಾರದ ಶಕ್ತಿ ಗ್ಯಾರಂಟಿ ಯೋಜನೆಯಡಿ ಉಚಿತ ಬಸ್ ಪ್ರಯಾಣ ಇರುವ ಹಿನ್ನೆಲೆಯಲ್ಲಿ ಎಲ್ಲಾ ಮಹಿಳೆಯರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುವುದು ಹೆಚ್ಚಾದರೆ, ಮತ್ತೊಂದೆಡೆ ರೈಲಿನಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಮೊದಲು ಬಸ್ ದರ ದುಬಾರಿ ಎಂದು ರೈಲು ಆಶ್ರಯಿಸಿದ್ದ ಮಹಿಳೆಯರು ಈಗ ಉಚಿತ ಬಸ್ ಪ್ರಯಾಣ ಕಲ್ಪಿಸಿರುವುದರಿಂದ ಅತ್ತ ಮುಖ ಮಾಡಿದ್ದಾರೆ. ಹಾಗಾಗಿ ರೈಲಿನಲ್ಲಿ ಪ್ರಯಾಣಿಸುವ ಮಹಿಳೆಯರ ಪ್ರಮಾಣ ಕಡಿಮೆಯಾಗಿದೆ. ಸಾಮಾನ್ಯ ಬೋಗಿಗಳು ಹಾಗೂ ಸ್ಲೀಪರ್ ಕೋಚ್‌ಗಳಲ್ಲಿ ಗಣನೀಯ ಪ್ರಮಾಣದಲ್ಲಿ ಮಹಿಳೆಯರ ಸಂಖ್ಯೆ ಕಡಿತಗೊಂಡಿದೆ. ಕಳೆದ ಎರಡು ದಿನಗಳಿಂದ ಮೈಸೂರು–ಸೊಲ್ಲಾಪುರ ಗೋಲ್ ಗುಂಬಜ್ ಎಕ್ಸ್‌ಪ್ರೆಸ್‌ನಲ್ಲಿ ಬಹುತೇಕ ಬೋಗಿಗಳಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇತ್ತು ಎಂದು ಹೇಳಲಾಗಿದೆ. ಮೈಸೂರಿನಿಂದ ಬೆಂಗಳೂರು, ಹಾಸನ, ಚಾಮರಾಜನಗರ ಈ ಭಾಗದ ರೈಲುಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆಯಂತೂ ಇಳಿಕೆಯಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಆದರೆ ಹೊರ ರಾಜ್ಯಕ್ಕೆ ತೆರಳುವಂತಹ ರೈಲುಗಳಲ್ಲಿ ರಿಸರ್ವೇಶನ್ ಇರುವುದರಿಂದ ಇಂತಹ ರೈಲುಗಳಲ್ಲಿ ಯಾವುದೇ ಪರಿಣಾಮ ಉಂಟಾಗಿಲ್ಲ. ಹೊರ ರಾಜ್ಯಗಳಿಗೆ ಉಚಿತ ಬಸ್ ಪ್ರಯಾಣ ಅವಕಾಶ ಇಲ್ಲದೆ ಇರುವುದರಿಂದ ಇಂತಹವರು ರೈಲು ಆಶ್ರಯಿಸಬೇಕಾಗಿರುವುದು ಅನಿವಾರ್ಯವಾಗಿದೆ ಎಂದು ಹೇಳಲಾಗುತ್ತಿದೆ.

ಫ್ರೀ ಸ್ಕೀಂ ಕಮಾಲ್; ಮಹಿಳೆಯರ ದರ್ಬಾರಿನಲ್ಲಿ ಪುರುಷರು ಕಂಗಾಲು



ಮೈಸೂರು. ಜೂ.14 (ಬಿಎಲ್‌ಯು)– ಕಾಂಗ್ರೆಸ್ ಸರ್ಕಾರದ ಶಕ್ತಿ ಯೋಜನೆಯ ಫ್ರೀ ಸ್ಕೀಂನಿಂದ ಮೈಸೂರಿನ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಗಂಡಸರು ಮಾಯವಾಗಿದ್ದಾರೆ. ಬಸ್ ನಿಲ್ದಾಣದ ಯಾವುದೇ ಸ್ಥಳ ನೋಡಿದರೂ ವನಿತೆಯರದ್ದೇ ಕಾರುಬಾರಾಗಿದೆ.

ರಾಜ್ಯ ಸರ್ಕಾರದ ಶಕ್ತಿ ಯೋಜನೆಯು ಮಹಿಳೆಯರಿಗೆ ಶಕ್ತಿ ನೀಡಿದೆ. ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಸಂಚರಿಸಲು ಮಹಿಳೆಯರಿಗೆ ಫ್ರೀ ಎಂದು ಸರ್ಕಾರ ಹೇಳಿದ್ದೆ ತಡ ಉಳಿದಿದ್ದ ಎಲ್ಲಾ ಕೆಲಸ ಕಾರ್ಯಗಳನ್ನು ಪೂರೈಸಿಕೊಳ್ಳಲು ವನಿತೆಯರು ಬಸ್ ಹತ್ತಿದ್ದಾರೆ.

ಕೊರೊನಾ ನಂತರ ಬಹಳಷ್ಟು ಜನರು ಬಸ್‌ನಲ್ಲಿ ಸಂಚರಿಸುವುದನ್ನು ಬಿಟ್ಟಿದ್ದರು. ಹೀಗೆ ಒಂದು ವಾರದ ಹಿಂದೆ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಆದರೆ ಫ್ರೀ ಎಂದು ಘೋಷಣೆ ಮಾಡುತ್ತಿದ್ದಂತೆ ಅದರ ಸದುಪಯೋಗಪಡಿಸಿಕೊಳ್ಳಲು ಮಹಿಳೆಯರು ಮುಗಿಬಿದ್ದಿದ್ದಾರೆ.

ಮೈಸೂರಿನ ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಮಹಿಳೆಯರೇ ತುಂಬಿದ್ದರು. ಅಲ್ಲೋ ಇಲ್ಲೋ ಬೆರಳಣಿಕೆಯಷ್ಟು ಮಾತ್ರ ಗಂಡಸರು ಇದ್ದರು. ಶಾಲಾ–ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಸೇರಿದಂತೆ ಮಹಿಳೆಯರು ಗುಂಪುಗುಂಪಾಗಿ ಸೇರಿದ್ದರು. ಯಾವುದೇ ಬಸ್ ನೋಡಿದರೂ ಅಲ್ಲಿ ಮಹಿಳೆಯರೇ ಕಾಣಿಸುತ್ತಿದ್ದರು. ಆದರೆ ವೋಲ್ವೊ ಬಸ್‌ಗಳಲ್ಲಿ ಮಾತ್ರ ಹೆಂಗಸರು ಮಾಯವಾಗಿದ್ದರು. ವೋಲ್ವೊ ಬಸ್‌ಗಳಲ್ಲಿ ಶಕ್ತಿ ಯೋಜನೆಯ ಸ್ಕೀಂ ಇಲ್ಲ ಎಂದು ಸರ್ಕಾರ ಈಗಾಗಲೇ ಹೇಳಿರುವ ಕಾರಣ ಯಾರೂ ವೋಲ್ವೊ ಬಸ್‌ಗಳತ್ತ ತಿರುಗಿ ಕೂಡ ನೋಡಲಿಲ್ಲ. ಇದರಿಂದ ವೋಲ್ವೊ ಬಸ್‌ಗಳಲ್ಲಿ ಸೀಟ್ ಖಾಲಿ ಖಾಲಿಯಾಗಿತ್ತು.

ರಾಮಚಂದ್ರ ನಾರಾಯಣ ನಾಯಕ್ ನಿಧನ



ಮೈಸೂರು: ಭಾರತ ರತ್ನ ಡಾ.ಎಂ.ವಿಶ್ವೇಶ್ವರಯ್ಯ ಗೃಹ ನಿರ್ಮಾಣ ಸಹಕಾರ ಸಂಘದ ಹಾಲಿ ನಿರ್ದೇಶಕರೂ, ಪೂರ್ವಾಧ್ಯಕ್ಷರೂ ಆಗಿದ್ದ ರಾಮಚಂದ್ರ ನಾರಾಯಣ ನಾಯಕ್ (84), ಬುಧವಾರ ಸಂಜೆ ಮೈಸೂರಿನ ವಿವೇಕಾನಂದ ನಗರದ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಒಬ್ಬ ಮಗ, ಓರ್ವ ಪುತ್ರಿ (ಅಮೆರಿಕ) 3 ಮೊಮ್ಮಕ್ಕಳನ್ನು ಅಗಲಿದ್ದಾರೆ. ಇವರು ನಿವೃತ್ತಿ ಮುಂಚೆ ರಾಜ್ಯ ಸರ್ಕಾರದಲ್ಲಿ, ಪಿಯು ಮಂಡಳಿ ಜಂಟಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ಮೃತರ ಅಂತ್ಯಕ್ರಿಯೆ ಇಂದು ಬೆಳಗ್ಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.14–ಮೈಸೂರಿನ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ 2023–24ನೇ ಸಾಲಿಗೆ ಐದನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಊಟ–ತಿಂಡಿ ಮತ್ತು ವಸತಿ ಮೂಲಭೂತ ಸೌಕರ್ಯಗಳು ಉಚಿತವಾಗಿದ್ದು, ಎಲ್ಲಾ ಜಾತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ನಿಗದಿತ ಅರ್ಜಿ ಫಾರಂಗಳನ್ನು ನಿಲಯದ ಆಡಳಿತ ಕಚೇರಿಯಲ್ಲಿ ವಿತರಿಸಲಾಗುವುದು. ಪ್ರವೇಶ ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಜಾತಿ, ಆದಾಯ ಪ್ರಮಾಣ ಪತ್ರ, ವರ್ಗಾವಣೆ ಪತ್ರ, 4 ಭಾವಚಿತ್ರ, ಆಧಾರ್ ಕಾರ್ಡ್ ಮುಂತಾದ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸುವಂತೆ ನಿಲಯದ ಕಾರ್ಯದರ್ಶಿ ಎಂ.ಪಾಟೀಲ್ ತಿಳಿಸಿದ್ದಾರೆ. ಮೊ.9739385079, 9686768828 ಸಂಖ್ಯೆಯನ್ನು ಸಂಪರ್ಕಿಸಬಹುದು.

ರಕ್ತದಾನ ಮಾಡಿ ಜೀವ ಉಳಿಸಿ: ನ್ಯಾಯಾಧೀಶ ಸಂಗ್ರೇಶಿ



ಮೈಸೂರು, ಜೂ.14(ಬಿಎಲ್‌ಯು)– ರಕ್ತದಾನ ಶ್ರೇಷ್ಠದಾನ ಎಂದು ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಅವರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ವಕೀಲರ ಸಂಘದಲ್ಲಿ ಭಾರತೀಯ ರೆಡ್ ಕ್ರಾಸ್ ಸೊಸೈಟಿ, ವಕೀಲರ ಸಂಘ, ನ್ಯಾಯಾಲಯ ನೌಕರರ ಸಂಘ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಂಯುಕ್ತವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವ ರಕ್ತದಾನ ದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಹಲವು ವಕೀಲರು ರಕ್ತದಾನ ಮಾಡಿದರು. ಇದೇ ವೇಳೆ ಮಾತನಾಡಿದ ನ್ಯಾಯಾಧೀಶರಾದ ಸಂಗ್ರೇಶಿ ಅವರು, ಅನ್ನದಾನ, ವಿದ್ಯಾದಾನದಷ್ಟೇ ರಕ್ತದಾನ ಕೂಡ ಎಲ್ಲಕ್ಕಿಂತ ಶ್ರೇಷ್ಠ, ರಕ್ತ ಕೊಡುವುದರಿಂದ ಬಹಳಷ್ಟು ಜನರ ಜೀವ ಉಳಿಯುತ್ತದೆ. ರಕ್ತದಾನ ಮಾಡುವುದರಿಂದ ಸ್ವಾಸ್ಥ್ಯ ಆರೋಗ್ಯ ಕಾಪಾಡಬಹುದು. ಈ ಕಾರಣದಿಂದ ರಕ್ತ ಕೊಡಿ, ಜೀವ ಉಳಿಸಿ ಎಂದು ಸಲಹೆ ನೀಡಿದರು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯ ದರ್ಶಿ ಬಿ.ಜಿ.ದಿನೇಶ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಸದಸ್ಯ ಬಿ.ಆರ್. ಚಂದ್ರಮೌಳಿ, ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಮೈಸೂರಿನ ಕೆ.ಆರ್.ಆಸ್ಪತ್ರೆ ರಕ್ತ ಬ್ಯಾಂಕ್ ಮುಖ್ಯಸ್ಥ ಡಾ.ಮಂಜುನಾಥ್ ಅವರು ಈ ವೇಳೆ ಉಪಸ್ಥಿತರಿದ್ದರು.



ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಆಯೋಜಿಸಿರುವ ಹೈ ಲೈಫ್ ವಧುವಿನ ಕೌಂಟರ್ ಆಭರಣ ಪರಿಕರಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಛಾಯಾ ನಂಜಪ್ಪ, ಮಹೀಮಾ ಹೆಗ್ಡೆ, ಮೋಕ್ಷ ಶರ್ಮಾ ಚಾಲನೆ ನೀಡಿದರು. ಈ ವೇಳೆ ಅಕ್ಷರ ಕುಮಾರ್, ಧನ್ಯ ತಟ್ಟರ್, ಕೆಕಶನ್ ವಾಗ್, ಆಲ್ಫಿ ಯಾವಾಗ್, ಪ್ರತಿಭಾ ನಾಯಕ್ ಮತ್ತಿತರರು ಉಪಸ್ಥಿತರಿದ್ದರು. ಈ ಪ್ರದರ್ಶನ ಮತ್ತು ಮಾರಾಟದಲ್ಲಿ ಗ್ಲಿಟ್ಜ್, ಟ್ಯಾಂಟಲೈಸಿಂಗ್ ಟ್ಯೂನಿಕ್ಸ್, ಚಿಕ್ ಕೇಪ್‌ಗಳು, ಸಿಜ್ಲಿಂಗ್ ಸಿಲ್ಕ್‌ನಲ್ಲಿ ಸೆಲೆಬ್ರಿಟಿ ಸ್ಟೈಲ್ ಜಾಕೆಟ್‌ಗಳು ಮತ್ತು ಡ್ರೇಪ್‌ಗಳು, ಸಮಕಾಲೀನ ಕಟ್‌ಗಳಲ್ಲಿ ಕ್ರೆಪ್, ನೀಲಿ ಬಣ್ಣದ ಪ್ರಿಂಟ್‌ಗಳು, ಮೋಡಿ ಮಾಡುವ ಕಸೂತಿಯೊಂದಿಗೆ ಹತ್ತು ಹಲವು ಉಡುಗೆಗಳು ಕಣ್ಮನ ಸೆಳೆಯುತ್ತಿವೆ.

ಜೂ.18ರಂದು ವಿಶ್ವ ಕರಾಟೆ ದಿನಾಚರಣೆ



ಮೈಸೂರು,ಜೂ.14 (ಪಿಎಂ)– ಮೈಸೂರು ಕರಾಟೆ ಅಸೋಸಿಯೇಷನ್ ವತಿಯಿಂದ ಜೂ.18ರಂದು ವಿಶ್ವ ಕರಾಟೆ ದಿನಾಚರಣೆ ಹಾಗೂ ಸಾಮೂಹಿಕ ಕರಾಟೆಯ ಭಂಗಿಗಳು (ಕತಾ) ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎಂ.ಸೋಸಲೆ ಸಿದ್ದರಾಜು ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿಯ ಸ್ಪೋರ್ಟ್ಸ್ ಪೆವಿಲಿಯನ್‌ನ ಮಹಾರಾಜ ಕಾಲೇಜು ಹಾಕಿ ಮೈದಾನದಲ್ಲಿ ಅಂದು ಬೆಳಗ್ಗೆ 8ಕ್ಕೆ ಕಾರ್ಯಕ್ರಮ ನಡೆಯಲಿದೆ. 1,500ಕ್ಕೂ ಹೆಚ್ಚು ಕರಾಟೆ ಪಟುಗಳು ಸಾಮೂಹಿಕವಾಗಿ ಕರಾಟೆಯ ಕತಾ (ಭಂಗಿಗಳು) ಪ್ರದರ್ಶನ ನೀಡಲಿದ್ದಾರೆ ಎಂದರು. ಮೈಸೂರು ಹಾಗೂ ಜಿಲ್ಲೆಯ ವಿವಿಧ ತಾಲೂಕುಗಳ ಕರಾಟೆ ಸಂಸ್ಥೆಗಳ ಕರಾಟೆ ಪಟುಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಕೃಷ್ಣಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಅಸೋಸಿಯೇಷನ್‌ನ ಉಪಾಧ್ಯಕ್ಷ ಎನ್.ಜಿ.ಶಿವ ದಾಸ್, ಎನ್.ಶಂಕರ, ಜಂಟಿ ಕಾರ್ಯದರ್ಶಿ ಎಂ.ಮಹದೇವ ಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯ ಶಿವಣ್ಣ ಗೋಷ್ಠಿಯಲ್ಲಿದ್ದರು.

ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜೀವರಕ್ಷಕ ಪ್ರಶಸ್ತಿ ಪ್ರದಾನ

ಮನುಷ್ಯನಿಗೆ ಆರೋಗ್ಯದ ಕಾಳಜಿ ಅತೀ ಅವಶ್ಯ: ಶಾಸಕ ಟಿ.ಎಸ್.ಶ್ರೀವತ್ಸ



ಮೈಸೂರು, ಜೂ. 14– ರಕ್ತದಾನ ಅತ್ಯಂತ ಶ್ರೇಷ್ಠವಾದುದು. ಇನ್ನೊಬ್ಬರ ಜೀವ ಉಳಿಸಲು ಸಹಾಯವಾಗುವ ಈ ಕಾರ್ಯದಲ್ಲಿ ಯುವ ಸಮುದಾಯ ಹೆಚ್ಚಿನ ಆಸಕ್ತಿ ವಹಿಸಿ ಸಾಮಾಜಿಕ ಜವಾಬ್ದಾರಿ ಪ್ರದರ್ಶಿಸಬೇಕಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಎನ್‌ಐಇ ಕಾಲೇಜು ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಮತ್ತು ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಹಾಗೂ ಎನ್‌ಐಇ ಕಾಲೇಜು ಸಹಯೋಗದೊಂದಿಗೆ 30ಕ್ಕೂ ಹೆಚ್ಚು ಬಾರಿ ಸ್ವಯಂ ಪ್ರೇರಿತ ರಕ್ತದಾನ ಮಾಡಿದ ರಕ್ತದಾನಿಗಳಿಗೆ ಜೀವರಕ್ಷಕ ಪ್ರಶಸ್ತಿ ಪ್ರದಾನ ಮಾಡುವ ಮೂಲಕ ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸಲಾಯಿತು. ಅತೀ ಹೆಚ್ಚು ಸ್ವಯಂ ಪ್ರೇರಿತ ರಕ್ತದಾನದ ಶಿಬಿರದ ಆಯೋಜಕರಾದ ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಸೀನಿಯರ್ ಜನರಲ್ ಮ್ಯಾನೇಜರ್ ಆರ್. ಜಗದೀಶ್ ಮತ್ತು ಅಸಿಸ್ಟೆಂಟ್ ಮ್ಯಾನೇಜರ್ ನಾಗರಾಜ್, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ಸೀನಿಯರ್ ಮ್ಯಾನೇಜರ್ ಲತಾ ಓಂ ಪ್ರಕಾಶ್, ಬ್ಲಡ್ ಆನ್ ಕಾಲ್ ಕ್ಲಬ್ ಸಂಸ್ಥಾಪಕ ಆನಂದ್ ಮಂಡೋತ್ ಹಾಗೂ ದೇವೇಂದ್ರ ಪರಿಹಾರಿಯ ಅವರನ್ನು ಅಭಿನಂದಿಸಲಾಯಿತು.

ಆನಂತರ 30ಕ್ಕೂ ಹೆಚ್ಚು ಬಾರಿ ಸ್ವಯಂ ಪ್ರೇರಿತ ರಕ್ತದಾನ ಮಾಡಿದ ಕೇಶವಗೌಡ ಎಂ.ಪಿ.,ನಂಜುಂಡಸ್ವಾಮಿ, ಕುಮಾರಿ ಮೇಘ, ಅನನ್ಯ ಪ್ರಭು, ಗಿರಿಜಾ ಪಾಟೀಲ್, ಹರೀಶ್ ಪಿ, ಮಸರ ರಾಮ್ ಮಾಲಿ, ಗೋಪಾಲ್, ರಾಮಚಂದ್ರ ಎಸ್, ಶಿವಕುಮಾರ್ ಹಾಂಜಿ, ಸುಹಾಸ್ ಅವರಿಗೆ ಜೀವರಕ್ಷಕ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಮನುಷ್ಯನಿಗೆ ಆಹಾರ ಎಷ್ಟು ಮುಖ್ಯವೋ ಆರೋಗ್ಯದ ಕಾಳಜಿಯೂ ಅಷ್ಟೇ ಅವಶ್ಯಕ. ಎಷ್ಟೇ ತಂತ್ರಜ್ಞಾನ ಮುಂದುವರೆದರೂ ರಕ್ತಕ್ಕೆ ಪರ್ಯಾಯ ರಕ್ತದಾನವೇ ಹೊರತು ಮತ್ತೊಂದಿಲ್ಲ. ಕೋವಿಡ್ ಸಂದರ್ಭದಲ್ಲಿ ರಕ್ತದಾನಿಗಳ ಸೇವೆ ಮತ್ತು ರಕ್ತನಿಧಿ ಕೇಂದ್ರಗಳ ಜವಾಬ್ದಾರಿಯುತ ಕೆಲಸಗಳು ಶ್ಲಾಘನೀಯವಾದುದು. ಮುಂದಿನ ದಿನದಲ್ಲಿ ರಾಜ್ಯ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಕ್ತದಾನಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಕ್ತದಾನಿಗಳಿಗೆ ಸರ್ಕಾರಿ ಸವಲತ್ತಿನಲ್ಲಿ ಪ್ರಮುಖ ಆದ್ಯತೆ ನೀಡಿ ಸಬ್ಸಿಡಿ ಯೋಜನೆಗಳನ್ನು ಕಲ್ಪಿಸುವ ಯೋಜನೆ ತರಲು ಮುಂದಾಗಬೇಕು ಎಂದರು.

ಮೇಯರ್ ಶಿವಕುಮಾರ್, ರಕ್ತ, ನೇತ್ರ, ದೇಹದಾನ, ಪವಿತ್ರ ರಕ್ತದಾನವು ಇನ್ನೊಂದು ಜೀವ ಉಳಿಸಬಲ್ಲ ಸಂಜೀವಿನಿಯಾಗಿದ್ದು, ದಾನಗಳಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಆಧುನಿಕ ದಿನದಲ್ಲಿ ರಕ್ತದಾನದ ಅವಶ್ಯಕತೆ ಹೆಚ್ಚಾಗಿದ್ದು, ಸಾರ್ವಜನಿಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ನೀವು ಮಾಡುತ್ತಿರುವುದು ಶ್ರೇಷ್ಠ ಕೆಲಸ, ದಯವಿಟ್ಟು ಇದನ್ನು ಮುಂದುವರಿಸಬೇಕು. ಈ ಮೂಲಕ ನೀವು ಅನೇಕ ಜೀವಗಳನ್ನು ಉಳಿಸಬಹುದು. ನಿಮ್ಮ ಕಾರ್ಯ ಶ್ಲಾಘನೀಯ ಎಂದು ತಿಳಿಸಿದರು. ಕೆಆರ್ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಮಂಜುನಾಥ್, ರಕ್ತದಾನ ಮಾಡುವುದರಿಂದ ಆಗುವ ಉಪಯೋಗಗಳ ಬಗ್ಗೆ ಜಾಗೃತಿ ಮೂಡಿಸಿದರು

DAPACU ಅಧಿಕಾರಿ ಡಾ. ಮಹಮ್ಮದ್ ಸಿರಾಜ್ ಅಹಮದ್, ಕೆಆರ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಮಂಜುನಾಥ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹಾಗೂ ಮುತ್ತಣ್ಣ ಎನ್‌ಐಇ ಕಾಲೇಜ್ ಉಪ ಪ್ರಾಂಶುಪಾಲ ಡಾ.ಎಂ.ಎಸ್.ಗಣೇಶ್ ಪ್ರಸಾದ್, ರಶ್ಮಿ, ಮಮತಾ, ಸುರೇಶ್, ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಹಾಜರಿದ್ದರು.

ಪೊನ್ನಂಪೇಟೆಯಲ್ಲಿ ಪಶು ಆಸ್ಪತ್ರೆಗೆ ಶಾಸಕ ಪೊನ್ನಣ್ಣ ಭೂಮಿಪೂಜೆ



ಗೋಣಿಕೊಪ್ಪ, ಜೂ.14– ಪೊನ್ನಂಪೇಟೆ ತಾಲೂಕು ಪಶು ಆಸ್ಪತ್ರೆ ಕಟ್ಟಡ ಕಾಮಗಾರಿಗೆ ಪೊನ್ನಂಪೇಟೆ ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ ಆವರಣದಲ್ಲಿ ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿ, ಕಟ್ಟಡದ ಕಾಮಗಾರಿಯ ಗುಣಮಟ್ಟ ಕಾಪಾಡಿಕೊಳ್ಳುವಂತೆ ಸೂಚನೆ ನೀಡಿದಲ್ಲದೆ, ಡಿಸೆಂಬರ್ ತಿಂಗಳ ಒಳಗೆ ಕಟ್ಟಡ ಪೂರ್ಣಗೊಳ್ಳಬೇಕು. ಉದ್ಘಾಟನೆಗೂ ಅವಕಾಶ ಮಾಡಿಕೊಡಬೇಕು ಎಂದರು. ಕೇಂದ್ರ ಪುರಸ್ಕೃತ ಯೋಜನೆಯ ಆರ್‌ಐಡಿಎಫ್ ಅನುದಾನದ 54 ಲಕ್ಷ ರೂ. ಹಣದಲ್ಲಿ ಆಸ್ಪತ್ರೆ ನಿರ್ಮಾಣ ಆಗುತ್ತಿದೆ ಎಂದು ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ ಡಾ. ಎ. ಎಸ್. ಶಾಂತೇಶ್ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ ಡಾ. ಲಿಂಗರಾಜು, ಪಶು ವೈದ್ಯರಾದ ಡಾ. ಭವಿಷ್ಯ ಕುಮಾರ್, ಡಾ. ಗಿರೀಶ್, ಡಾ. ಚಂದ್ರಶೇಖರ್, ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ, ಜಿ. ಪಂ. ಮಾಜಿ ಸದಸ್ಯ ಮುಕ್ಕಳೇರ ಕುಶಾಲಪ್ಪ, ಕಾಂಗ್ರೆಸ್ ಮುಖಂಡ ಪಿ. ಕೆ. ಪೊನ್ನಪ್ಪ ಇದ್ದರು.

ಜೂ.30 ರಂದು ಅಂಚೆ ಅದಾಲತ್

ಮಡಿಕೇರಿ, ಜೂ.14– ಅಂಚೆ ಅದಾಲತ್‌ನ ಸಭೆಯು ಜೂ.30 ರಂದು ಬೆಳಗ್ಗೆ 11.30 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿ ಸಿದ್ದಾಪುರ ರಸ್ತೆ ಅಶೋಕಪುರದಲ್ಲಿ ನಡೆಯಲಿದೆ.

ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ಎಲ್ಲಾ ತರಹದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ. ದೂರುಗಳಿದ್ದಲ್ಲಿ 'ಅಂಚೆ ಅದಾಲತ್' ಎಂದು ಬರೆದು ಅಂಚೆ ಅಧೀಕ್ಷಕರು, ಕೊಡಗು ಅಂಚೆ ವಿಭಾಗ, ಮಡಿಕೇರಿ ಇವರಿಗೆ ಜೂ.28 ರೊಳಗೆ ತಲುಪುವಂತೆ ಕಳುಹಿಸಲು ಕೋರಿದೆ.

ಹೊಸ ಪೈಪ್‌ಲೈನ್ ಅಳವಡಿಕೆ ಮೂಲಕ ಮಡಿಕೇರಿಗೆ ಸಮರ್ಪಕ ಕುಡಿಯುವ ನೀರು

ಯೋಜನೆಗೆ 60 ಕೋಟಿ ರೂ. ಅಗತ್ಯ, 20 ಕೋಟಿ ಬಿಡುಗಡೆ

ಉಳಿದ ಹಣ ಬಿಡುಗಡೆಗೆ ಮನವಿ, ಅನುಮೋದನೆ ಸಿಕ್ಕ ಕೂಡಲೇ ಕಾಮಗಾರಿ ಆರಂಭ



ಮಡಿಕೇರಿ, ಜೂ.14– ನಗರದ ಜನರಿಗೆ ಸಮರ್ಪಕವಾಗಿ ಕುಡಿಯುವ ನೀರನ್ನು ಪೂರೈಸಲು ಹಳೆಯ ಪೈಪ್‌ಲೈನ್‌ಗಳನ್ನು ಬದಲಾಯಿಸಿ ನೂತನ ಪೈಪ್‌ಲೈನ್‌ಗಳ ಅಳವಡಿಕೆಗೆ 60 ಕೋಟಿ ರೂಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈಗಾಗಲೇ 20 ಕೋಟಿ ರೂ. ಬಿಡುಗಡೆಯಾಗಿದ್ದು, ಉಳಿದ ಹಣವನ್ನು ಬಿಡುಗಡೆ ಮಾಡುವಂತೆ ನೂತನ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ತಿಳಿಸಿದ್ದಾರೆ.

ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 120 ಕಿ.ಮೀ.ನಷ್ಟು ನೂತನ ಪೈಪ್‌ಗಳನ್ನು ಅಳವಡಿಸಲು ಯೋಜನೆ ರೂಪಿಸಲಾಗಿದ್ದು, ಸರ್ಕಾರದ ಅನುಮೋದನೆ ದೊರೆತ ತಕ್ಷಣ ಕಾಮಗಾರಿ ಆರಂಭಿಸಲಾಗುವುದು ಎಂದರು.

ನಗರದ ಜನರಿಗೆ ಯಾವುದೇ ಅಡಚಣೆ ಇಲ್ಲದೆ ಕುಡಿಯುವ ನೀರು ಒದಗಿಸಲು ನಗರಸಭೆ ಬದ್ಧವಾಗಿದೆ. ಕಳೆದ ಕೆಲವು ದಿನಗಳ ಕಾಲ ತಾಂತ್ರಿಕ ಕಾರಣಗಳಿಂದ ನೀರಿನ ಸಮಸ್ಯೆ ಎದುರಾಗಿತ್ತು ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸುತ್ತೇವೆ, ಮೋಟಾರ್‌ಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗಿದೆ. ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದ್ದಕ್ಕೆ ವಿಷಾದ ವ್ಯಕ್ತಪಡಿಸುವುದಾಗಿ ತಿಳಿಸಿದರು.

ಹೂಳೆತ್ತಲು ಯೋಜನೆ: ನಗರದಲ್ಲಿ 57 ಕೊಳವೆ ಬಾವಿಗಳಿದ್ದು, 30 ಕೊಳವೆ ಬಾವಿಗಳಿಗೆ ಮೋಟಾರ್ ಅಳವಡಿಸಲಾಗಿದೆ. ಇದಕ್ಕಾಗಿ ಸುಮಾರು 17 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಕೂಟುಹೊಳೆ, ರೋಷನಾರ ಸೇರಿದಂತೆ ನಗರದ ಜಲಮೂಲಗಳ ಹೂಳೆತ್ತಲು ಯೋಜನೆ ರೂಪಿಸಲಾಗಿದ್ದು, ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ಕಸ ವಿಲೇವಾರಿ ಘಟಕ ಸ್ಥಾಪನೆಗೆ ಮಂಜೂರಾಗಿರುವ 10 ಎಕರೆ ಜಾಗಕ್ಕೆ ಬೇಲಿ ಹಾಕಲಾಗಿದೆ. ಇಲ್ಲಿನ ಅಭಿವೃದ್ಧಿ ಕಾರ್ಯಗಳಿಗಾಗಿ 700 ಲಕ್ಷ ರೂ.ಗಳ ಅಗತ್ಯವಿದ್ದು, ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಮಳೆಗಾಲಕ್ಕೂ ಮೊದಲು ಬೀದಿದೀಪಗಳನ್ನು ಅಳವಡಿಸಲಾಗುವುದು, ಮಳೆ ನೀರು ಸರಾಗವಾಗಿ ಹರಿಯಲು ಚರಂಡಿಗಳ ಹೂಳೆತ್ತಲಾಗುವುದು ಎಂದರು.

ಎಲ್ಲೆಂದರಲ್ಲಿ ಕಸ: ಪ್ರವಾಸಿಗರು ಹಾಗೂ ಹೋಂ ಸ್ಟೇ ನಡೆಸುತ್ತಿರುವವರು ಎಲ್ಲೆಂದರಲ್ಲಿ ಕಸವನ್ನು ಸುರಿಯುತ್ತಿದ್ದು, ನಗರದ ಅಂದಗೆಡಿಸುತ್ತಿದ್ದಾರೆ. ಪ್ರತಿದಿನ ಕಸ ಸಂಗ್ರಹಿಸುವ ವಾಹನ ಮನೆ ಬಾಗಿಲಿಗೆ ಬಂದರೂ ಕಸ ಹಾಕದೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ನಗರದ ಹಿತದೃಷ್ಟಿಯಿಂದ ಸಾರ್ವಜನಿಕರು ಕಸವನ್ನು ವಾಹನಕ್ಕೆ ಹಾಕಿ ಸಹಕರಿಸಬೇಕೆಂದು ಅನಿತಾ ಪೂವಯ್ಯ ಮನವಿ ಮಾಡಿದರು.

ಪ್ಲಾಸ್ಟಿಕ್ ಬಾಟಲಿ ಮತ್ತು ಒಣ ತ್ಯಾಜ್ಯಗಳನ್ನು ನಿಗದಿತ ಸ್ಥಳದಲ್ಲಿ ಹಾಕಲು ರಾಜಾಸೀಟು, ಖಾಸಗಿ ಬಸ್ ನಿಲ್ದಾಣ ಸೇರಿದಂತೆ ನಗರದ ಮೂರು ಕಡೆ ಒಣ ಕಸ ಸಂಗ್ರಹದ ತೊಟ್ಟಿಗಳನ್ನು ಇಡಲಾಗಿದೆ. ಖಾಸಗಿ ಸಂಘ, ಸಂಸ್ಥೆಗಳ ಸಹಭಾಗಿತ್ವದಲ್ಲಿ ಇನ್ನೂ ಅನೇಕ ಕಡೆ ತೊಟ್ಟಿಗಳನ್ನು ಇಡಲಾಗುವುದು ಮತ್ತು ಶುಚಿತ್ವಕ್ಕೆ ಆದ್ಯತೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯರುಗಳಾದ ಬಿಜೆಪಿಯ ಮಹೇಶ್ ಜೈನಿ, ಉಮೇಶ್ ಸುಬ್ರಮಣಿ, ಪಕ್ಷದ ನಗರಾಧ್ಯಕ್ಷ ಮನು ಮಂಜುನಾಥ್ ಹಾಗೂ ಜಿಲ್ಲಾ ಉಪಾಧ್ಯಕ್ಷ ಅರುಣ್ ಕುಮಾರ್ ಉಪಸ್ಥಿತರಿದ್ದರು.

ದರ ಇಳಿಕೆಗೆ ಆಗ್ರಹ

ವಿದ್ಯುತ್ ದರವನ್ನು ನೂತನ ಕಾಂಗ್ರೆಸ್ ಸರ್ಕಾರವೇ ಏರಿಕೆ ಮಾಡಿದ್ದು, ವಿನಾ ಕಾರಣ ಹಿಂದಿನ ಬಿಜೆಪಿ ಸರ್ಕಾರದ ಮೇಲೆ ಗೂಬೆ ಕೂರಿಸಲಾಗುತ್ತಿದೆ ಎಂದು ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯುತ್ ದರ ಇಳಿಕೆಗೆ ಒತ್ತಾಯಿಸಿ ಪಕ್ಷದ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರದ ಮೇಲೆ ಗೂಬೆ ಕೂರಿಸುವ ಮೂಲಕ ಕಾಂಗ್ರೆಸ್ ಜನರ ಹಾದಿ ತಪ್ಪಿಸುತ್ತಿದೆ ಎಂದು ಟೀಕಿಸಿದರು. ವಿದ್ಯುತ್ ದರವನ್ನು ಇಳಿಕೆ ಮಾಡುವ ಸಂಪೂರ್ಣ ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ದುಬಾರಿ ವಿದ್ಯುತ್ ದರದಿಂದ ಬೇಸತ್ತಿರುವ ಜನರ ಹಿತ ದೃಷ್ಟಿಯಿಂದ ದರವನ್ನು ತಕ್ಷಣ ಇಳಿಕೆ ಮಾಡಬೇಕು. ತಪ್ಪಿದಲ್ಲಿ ದರ ಇಳಿಕೆ ಯಾಗುವಲ್ಲಿಯವರೆಗೆ ಬಿಜೆಪಿ ನಿರಂತರ ಹೋರಾಟ ನಡೆಸಲಿದೆ ಎಂದರು.

ನಾಳೆ ರೇಡಿಯೋ ಸಂವಾದ ಕಾರ್ಯಕ್ರಮ

ಮಡಿಕೇರಿ, ಜೂ.14– ಜಿಲ್ಲೆಯ ರೈತರು ಮುಂಗಾರು ಹಂಗಾಮಿನ ಸಿದ್ಧತೆ ಮತ್ತು ವಿವಿಧ ಬೆಳೆಗಳಿಗೆ ರಸಗೊಬ್ಬರಗಳ ಬಳಕೆ, ಪೂರೈಕೆ ಕುರಿತು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕಾಫಿ ಮಂಡಳಿಯ ಅಧಿಕಾರಿಗಳೊಂದಿಗೆ ಜೂ.16 ರಂದು ಬೆಳಗ್ಗೆ 10.30 ಗಂಟೆಗೆ ರೇಡಿಯೋ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜು.11, ಬಹಿರಂಗ ಹರಾಜು

ಮಡಿಕೇರಿ, ಜೂ.14– ಆಲೂರು ಸಿದ್ದಾಪುರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ದಾಸ್ತಾನಿರುವ ನಿರುಪಯುಕ್ತ ಸಾಮಗ್ರಿಗಳು, ಯಂತ್ರೋಪಕರಣಗಳನ್ನು ಎಲ್ಲಿ, ಹೇಗಿವೆಯೋ, ಅದೇ ಸ್ಥಿತಿಯಲ್ಲಿ ಜು.11 ರಂದು ಬೆಳಗ್ಗೆ 11 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು ಎಂದು ಆಲೂರು ಸಿದ್ದಾಪುರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

ರಕ್ತದಾನ ಮಾಡಿ ಮತ್ತೊಬ್ಬರ ಜೀವ ಉಳಿಸಿ: ಡಾ.ಸೀನಪ್ಪ



ಕುಶಾಲನಗರ, ಜೂ.14– ಕೊಡಗು ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಸ್ನಾತಕೋತ್ತರ ಕೇಂದ್ರ, ಕೊಡಗು ವಿಶ್ವವಿದ್ಯಾನಿಲಯ ಚಿಕ್ಕ ಅಳುವಾರ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಕ್ತ ನಿಧಿ ಕೇಂದ್ರ, ಜಿಲ್ಲಾ ಆಸ್ಪತ್ರೆ, ಮಡಿಕೇರಿ, ಸೋ.ಪೇಟೆ ತಾಲೂಕು ಆರೋಗ್ಯಾಧಿಕಾರಿ ಕಚೇರಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕೊಡಗು ಶಾಖೆ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಕೊಡಗು ಶಾಖೆ, ಕುಶಾಲನಗರ ರೋಟರಿ ಸಂಸ್ಥೆ, ಲಯನ್ಸ್ ಸಂಸ್ಥೆ ಹಾಗೂ ವಾಣಿಜ್ಯೋದ್ಯಮಿಗಳ ನಿಗಮದ ಸಂಯುಕ್ತ ಆಶ್ರಯದಲ್ಲಿ ಚಿಕ್ಕ ಅಳುವಾರದ ಕೊಡಗು ವಿವಿ ಜ್ಞಾನ ಕಾವೇರಿ ಇಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ನಡೆಯಿತು.

ಕೊಡಗು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಡಾ.ಸೀನಪ್ಪ ಉದ್ಘಾಟಿಸಿ ಮಾತನಾಡಿ, ರಕ್ತದಾನ ಶ್ರೇಷ್ಠದಾನವಾಗಿದ್ದು, ಯುವಜನತೆ ಮುಂದೆ ಬಂದು ರಕ್ತದಾನ ಮಾಡುವ ಮೂಲಕ ಮಾದರಿಯಾಗುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ಅವರು ಮಾತನಾಡಿ, ಕಾರ್ಲ್ ಲ್ಯಾಂಡ್‌ಸ್ಟೀನರ್ ಅವರು ರಕ್ತದ ಗುಂಪನ್ನು ಕಂಡುಹಿಡಿದ ವಿಜ್ಞಾನಿ. ಇವರ ಹುಟ್ಟುಹಬ್ಬದ ದಿನವನ್ನು ವಿಶ್ವ ರಕ್ತದಾನಿಗಳ ದಿನವಾಗಿ ಆಚರಿಸಲಾಗುತ್ತದೆ ಎಂದರು.

ಜಿಲ್ಲಾಸ್ಪತ್ರೆಯ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಕರುಂಬಯ್ಯ ಅವರು ರಕ್ತ ವಿಧಳನಾ ಘಟಕ, ರಕ್ತನಿಧಿ ಕೇಂದ್ರದ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡಿದರು. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ರವೀಂದ್ರ ರೈ ಮಾತನಾಡಿ, ಎಲ್ಲರೂ ಮುಂದಾಗಿ ರಕ್ತದಾನ ಮಾಡಿ. ರಕ್ತ ಅಗತ್ಯವಿರುವವರ ಜೀವ ಉಳಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಆನಂದ್, ರಕ್ತದ ವೆಬ್‌ಸೈಟ್ e-raktkosh ದಲ್ಲಿ ದಾನಿಗಳು ಹಾಗೂ ರಕ್ತದಾನ ಶಿಬಿರಗಳನ್ನು ನೋಂದಣಿ ಮಾಡಬಹುದು ಎಂದು ತಿಳಿಸಿದರು.

ತೊರೆನೂರು ಗ್ರಾಪಂ ಅಧ್ಯಕ್ಷೆ ರೂಪ ಮಹೇಶ್ ಮಾತನಾಡಿ, ರಕ್ತದಾನ ದಿನಾಚರಣೆ ಒಂದು ಉತ್ತಮ ಕಾರ್ಯಕ್ರಮವಾಗಿದೆ. ಮುಂದಿನ ಹಂತದಲ್ಲಿ ಗ್ರಾಪಂ ವ್ಯಾಪ್ತಿಯಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸುವ ಬಗ್ಗೆ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಅತೀ ಹೆಚ್ಚು ರಕ್ತದಾನ ಮಾಡಿದ ರಕ್ತದಾನಿಗಳಾದ ಶರತ್ ಕಾಂತೆ(61 ಬಾರಿ), ಮಾರುತಿ ಪ್ರಸಾದ್(21 ಬಾರಿ), ಮಣಿಕಂಠ (13 ಬಾರಿ) ಮತ್ತು ಪ್ರತಿಷ್ಠಾ(5 ಬಾರಿ) ಇವರನ್ನು ಸನ್ಮಾನಿಸಲಾಯಿತು. ರಕ್ತದಾನಿಗಳಾದ ಶರತ್‌ಕಾಂತ್, ಮಾರುತಿ ಪ್ರಸಾದ್, ಮಣಿಕಂಠ ಹಾಗೂ ಪ್ರತಿಷ್ಠ ಅವರು ರಕ್ತದಾನ ಮಾನವೀಯ ಸೇವೆ, ಸಮಾಜ ಸೇವೆ ಎಂದು ಅನುಭವ ಹಂಚಿಕೊಂಡರು. ಪ್ರಥಮ ಬಾರಿ ರಕ್ತದಾನ ಮಾಡಿದ ಜ್ಞಾನ ಕಾವೇರಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ಅನುಭವ ಹಂಚಿಕೊಂಡರು.

ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ ಭಾಷಣ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿದರು. ಕುಶಾಲನಗರ ರೋಟರಿ ಸಂಸ್ಥೆಯ ಉಲ್ಲಾಸ್ ಕೃಷ್ಣ, ಸ್ವಾಮಿ ವಿವೇಕಾನಂದ ಮೂವ್‌ಮೆಂಟ್‌ನ ವ್ಯವಸ್ಥಾಪನ ಸಮಿತಿ ಸದಸ್ಯರಾದ ಎಂ.ಡಿ.ರಂಗಸ್ವಾಮಿ, ಕುಶಾಲನಗರ ವಾಣಿಜ್ಯೋಧ್ಯಮಿಗಳ ನಿಗಮದ ಅಧ್ಯಕ್ಷ ಅಮೃತ ರಾಜ್, ಸೋಮವಾರಪೇಟೆ ತಾಲೂಕು ಆರೋಗ್ಯಾಧಿಕಾರಿ ಶ್ರೀನಿವಾಸ, ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ, ವೈದ್ಯಾಧಿಕಾರಿ ಡಾ.ಅಶೋಕ್, ಜಿಲ್ಲಾ ಏಡ್ಸ್ ನಿಯಂತ್ರಣಾ ಘಟಕದ ಸಿಬ್ಬಂದಿಗಳು, ಜಿಲ್ಲಾ ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

ಮರದ ಕೊಂಬೆ ಬಿದ್ದು ವ್ಯಕ್ತಿ ಸಾವು



ಮಡಿಕೇರಿ, ಜೂ.14– ಮರ ಕಪಾತು ಕೆಲಸ ನಿರ್ವಹಿಸುತ್ತಿದ್ದ ಸಂದರ್ಭ ಮರದ ಕೊಂಬೆ ಬಿದ್ದು, ವ್ಯಕ್ತಿಯೋರ್ವರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಮಡಿಕೇರಿ ಬಳಿಯ ಇಬ್ನಿ ಎಸ್ಟೇಟ್‌ನಲ್ಲಿ ಸಂಭವಿಸಿದೆ. ಬೋಯಿಕೇರಿ ನಿವಾಸಿ ಖಲಂದರ್ (38) ಸಾವನ್ನಪ್ಪಿದ ದುರ್ದೈವಿಯಾಗಿದ್ದಾರೆ.

ಖಲಂದರ್ ಸೇರಿದಂತೆ ಮೂವರು ಕಾರ್ಮಿಕರು ಇಬ್ನಿ ಎಸ್ಟೇಟ್‌ನಲ್ಲಿ ಮರ ಕಪಾತು ಕೆಲಸ ನಿರ್ವಹಿಸುತ್ತಿದ್ದರು ಎನ್ನಲಾಗಿದೆ. ಬುಧವಾರ ಮಧ್ಯಾಹ್ನದ ಸಮಯದಲ್ಲಿ ಸಹ ಕಾರ್ಮಿಕ ಮರ ಕಪಾತು ಕೆಲಸ ನಿರ್ವಹಿಸುತ್ತಿದ್ದ ಸಂದರ್ಭ ರೆಂಬೆ ಸವರಲು ಮರದ ಕೆಳಗೆ ನಿಂತಿದ್ದ ಖಲಂದರ್ ಅವರ ತಲೆ ಮೇಲೆ ಮರದ ಕೊಂಬೆ ಬಿದ್ದಿದೆ. ಪರಿಣಾಮ ಸ್ಥಳದಲ್ಲೇ ಖಲಂದರ್ ಸಾವನ್ನಪ್ಪಿದ್ದಾರೆ.

ಘಟನಾ ಸ್ಥಳಕ್ಕೆ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಖಲಂದರ್ ಪತ್ನಿ ಸೇರಿದಂತೆ ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಬಸವ ಭವನ ನಿರ್ಮಾಣಕ್ಕೆ ಭೂಮಿಪೂಜೆ



ಶಾಸಕ ಪುಟ್ಟರಂಗಶೆಟ್ಟಿ ಗೈರು

ಚಾಮರಾಜನಗರ, ಜೂ.14– ಇಂದಿಲ್ಲಿ ನಡೆದ ಬಸವಭವನದ ಭೂಮಿಪೂಜೆಗೆ ಸ್ಥಳೀಯ ಶಾಸಕ ಸಿ. ಪುಟ್ಟರಂಗಶೆಟ್ಟಿ ಗೈರು ಹಾಜರಾಗಿದ್ದರು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ, ಸಿದ್ಧಗಂಗಾ ಶ್ರೀ ಹಲವು ಮಠಾಧಿಪತಿಗಳು ಹಾಗೂ ಜಿಲ್ಲೆಯ ಶಾಸಕರು ಮತ್ತು ಗಣ್ಯರು ಪಾಲ್ಗೊಂಡಿದ್ದರು. ಆದರೆ, ಸ್ಥಳೀಯ ಶಾಸಕ ಸಿ. ಪುಟ್ಟರಂಗಶೆಟ್ಟಿ ಗೈರು ಹಾಜರಿ ಎದ್ದು ಕಾಣುತ್ತಿತ್ತು. ಪುಟ್ಟರಂಗಶೆಟ್ಟಿ ಅವರನ್ನು ಭೂಮಿಪೂಜೆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೆವು. ಅವರು ಬೆಂಗಳೂರಿಗೆ ತೆರಳಿದ್ದರಿಂದ ಕಾರ್ಯಕ್ರಮಕ್ಕೆ ಬಂದಿರಲಿಲ್ಲ ಎಂದು ವೀರಶೈವ ಲಿಂಗಾಯಿತ ಮಹಾಸಭಾದ ಪದಾಧಿಕಾರಿಯೊಬ್ಬರು ತಿಳಿಸಿದರು. ಪುಟ್ಟರಂಗಶೆಟ್ಟಿ ಅವರ ಅನುಪಸ್ಥಿತಿಯ ಬಗ್ಗೆ ಕಾರ್ಯಕ್ರಮದ ವೇಳೆ ಅನೇಕ ರೀತಿಯ ಚರ್ಚೆಗಳು ನಡೆಯುತ್ತಿದ್ದು, ಕೇಳಿ ಬಂತು.

ಚಾಮರಾಜನಗರ, ಜೂ.14– ಸುತ್ತೂರು ಹಾಗೂ ಸಿದ್ಧಗಂಗಾ ಮಠದ ಶ್ರೀಗಳ ಸಾನ್ನಿಧ್ಯದಲ್ಲಿ ಜಿಲ್ಲೆಯ ಮಠಾಧೀಶರುಗಳ ದಿವ್ಯ ಸಮ್ಮುಖದಲ್ಲಿ ನಗರದಲ್ಲಿ ಬಸವ ಭವನದ ಭೂಮಿಪೂಜೆ ನೆರವೇರಿತು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾ ಘಟಕದಿಂದ ನಗರದ ಸತ್ಯಮಂಗಲ ರಸ್ತೆಯ ಶಿವಕುಮಾರಸ್ವಾಮಿ ಭವನದ ಪಕ್ಕದಲ್ಲಿ ಸರ್ಕಾರ ಮಂಜೂರು ಮಾಡಿರುವ 30 ಗುಂಟೆ ಜಾಗದಲ್ಲಿ ಬಸವ ಭವನ ಭೂಮಿಪೂಜೆಯನ್ನು ಸುತ್ತೂರು, ಸಿದ್ದಗಂಗಾ ಮತ್ತು ವಿವಿಧ ಮಠಾಧೀಶರು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಚ್.ಎಂ. ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ಮಾಜಿ ಸಂಸದ ಕಾಗಲವಾಡಿ ಎಂ. ಶಿವಣ್ಣ, ಮಾಜಿ ಶಾಸಕರಾದ ಪರಿಮಳಾ ನಾಗಪ್ಪ, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ. ರುದ್ರೇಶ್, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾ ಘಟಕ ಅಧ್ಯಕ್ಷ ನಂದೀಶ್ ಮೂಡ್ಲಪುರ, ರಾಜ್ಯ ಕಾರ್ಯದರ್ಶಿ ರೇಣುಕಾಪ್ರಸನ್ನ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಡಿ. ನಾಗೇಂದ್ರ, ಜಿಲ್ಲಾ ಕಾರ್ಯದರ್ಶಿ ಲೋಕೇಶ್, ರಾಜ್ಯ ಸಮಿತಿ ಸದಸ್ಯ ಸುಜೇಂದ್ರ, ತಾಲೂಕು ಅಧ್ಯಕ್ಷರಾದ ನಟೇಶ್, ಮಹದೇವಪ್ರಸಾದ್, ನಂಜಪ್ಪ, ಪುಟ್ಟಸುಬ್ಬಪ್ಪ, ಬಸವರಾಜು, ನಿರ್ದೇಶಕರು ಹಾಗೂ ತಾಲೂಕು ಘಟಕಗಳ ಪದಾಧಿಕಾರಿಗಳು, ಜಿಲ್ಲಾ ಘಟಕ ಪದಾಧಿಕಾರಿಗಳು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ, ಚಾಮುಲ್ ನಿರ್ದೇಶಕ ನಾಗೇಂದ್ರ, ಸದಸ್ಯರಾದ ಎಚ್.ಎಸ್. ಬಸವರಾಜಪ್ಪ, ಸದಾಶಿವಮೂರ್ತಿ, ಜಿಪಂ ಮಾಜಿ ಅಧ್ಯಕ್ಷರಾದ ಜಿ. ನಾಗಶ್ರೀಪ್ರತಾಪ್, ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್, ವರುಣ ಮಹೇಶ್, ಪ್ರಭು, ಪುರುಷೋತ್ತಮ್, ಕಾಡಹಳ್ಳಿ ಮಧು, ನಿರಂಜನ್ ಮೂರ್ತಿ, ಪ್ರಮೋದ್, ಜಿ.ಎಂ. ಪ್ರಭುಸ್ವಾಮಿ ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

ಟ್ರ್ಯಾಕ್ಟರ್ ಶೋರೂಂ ಉದ್ಘಾಟನೆ



ಚಾಮರಾಜನಗರದಲ್ಲಿ ಬುಧವಾರ ಮ್ಯಾಸ್ಸಿಫರ್ಗ್ಯೂಸನ್ (ಟಾಫೆ) ಟ್ರ್ಯಾಕ್ಟರ್ ಶೋರೂಂ ಅನ್ನು ಸುತ್ತೂರು ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಕ್ಷೇತ್ರದ ಶ್ರೀಗಳಾದ ಶ್ರೀ ಸಿದ್ದಲಿಂಗಸ್ವಾಮೀಜಿ ಅವರು ಉದ್ಘಾಟಿಸಿದರು. ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಉದ್ಯಮಿ ಪಿ. ಮರಿಸ್ವಾಮಿ, ಭೂಮಿ ಟ್ರ್ಯಾಕ್ಟರ್ಸ್ ಮಾಲೀಕರಾದ ಮಹೇಶ್ ಎಂ. (ಎಂಆರ್‌ಎಫ್), ಮಹೇಶ್ ಸಹೋದರಿ ಚೈತ್ರ ಸಿ. ಅವರನ್ನು ಚಿತ್ರದಲ್ಲಿ ಕಾಣಬಹುದು.

ಜೂ.20, ಜಿಲ್ಲಾ ಅಭಿವೃದ್ಧಿ ಸಮನ್ವಯ, ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ

ಚಾಮರಾಜನಗರ, ಜೂ.14– ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯು ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆಯಲ್ಲಿ ಜೂನ್ 20 ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಪಂ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಕೃತಿ ವಿಪತ್ತು ಅನಾಹುತ ತಡೆಗೆ ಜಾಗೃತಿ ಅಗತ್ಯ: ಡಿಸಿ ರಮೇಶ್



ಚಾಮರಾಜನಗರ, ಜೂ.14– ಪ್ರಕೃತಿ ವಿಪತ್ತುಗಳಿಂದಾಗುವ ಅನಾಹುತವನ್ನು ಪರಿಣಾಮಕಾರಿಯಾಗಿ ತಡೆಯಲು ಯುವಜನತೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ ಎಂದು ಜಿಲ್ಲಾಧಿಕಾರಿ ಡಿ. ಎಸ್. ರಮೇಶ್ ತಿಳಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಪಂ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿಪತ್ತು ನಿರ್ವಹಣಾ ಕ್ಷಿಪ್ರ ತರಬೇತಿಯ ಕಾರ್ಯಾಗಾರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕೃತಿ ವಿಕೋಪವು ಯಾವ ಸಂದರ್ಭದಲ್ಲಿ ಸಂಭವಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಅದಕ್ಕಾಗಿ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವುದು ಸೂಕ್ತ. ಪ್ರಕೃತಿ ವಿಕೋಪದಲ್ಲಿ ಸಣ್ಣ ಸಣ್ಣ ವಿಚಾರಗಳು ಸಹ ದೊಡ್ಡ ರೀತಿಯ ತೊಂದರೆ ಉಂಟು ಮಾಡಬಹುದು. ಈ ರೀತಿಯ ಪರಿಸ್ಥಿತಿಯಿಂದ ಪಾರಾಗಲೂ ಎಲ್ಲರಿಗೂ ಜಾಗೃತಿ ಅತ್ಯಂತ ಅವಶ್ಯಕವಾಗಿದೆ ಎಂದರು. ಜಿಲ್ಲೆಯಲ್ಲಿ ಪ್ರಕೃತಿ ನಿರ್ವಹಣಾ ಕ್ಷಿಪ್ರ ತರಬೇತಿ ಕಾರ್ಯಾಗಾರದ ಪ್ರಯೋಜನವನ್ನು ಪಡೆಯಬೇಕು. ಪ್ರಕೃತಿ ವಿಕೋಪದಿಂದ ಹಾನಿಗಳು ಉಂಟಾದಾಗ ಮೊದಲು ಯಾವ ಹಂತದಲ್ಲಿ ಕಾರ್ಯ ನಿರ್ವಹಿಸಬೇಕು ಎಂಬ ವಿಷಯಗಳ ಬಗ್ಗೆ ತಿಳಿದುಕೊಂಡಾಗ ಮಾತ್ರ ಪ್ರಕೃತಿ ವಿಕೋಪದಂತಹ ಸಮಸ್ಯೆಗಳಿಂದ ಪಾರಾಗಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಿ. ಎಸ್. ರಮೇಶ್ ತಿಳಿಸಿದರು.

ನಂತರ ವಿಪತ್ತು ಸಂದರ್ಭ, ಅಗ್ನಿ ಅನಾಹುತ, ವಿದ್ಯುತ್‌ಗೆ ಸಂಬಂಧಿಸಿದ ಅವಘಡ, ಎಲ್‌ಪಿಜಿ ಗ್ಯಾಸ್ ಸ್ಫೋಟ ಸಂದರ್ಭದಲ್ಲಿ ವಹಿಸಬೇಕಿರುವ ಕ್ರಮಗಳ ಬಗ್ಗೆ ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಇಲಾಖೆಯ ಅಧಿಕಾರಿ ನವೀನ್ ಕುಮಾರ್ ಅವರು ಪ್ರಾತ್ಯಕ್ಷಿಕೆ ಮೂಲಕ ತಿಳಿಸಿದರು. ವಿಪತ್ತು ನಿರ್ವಹಣೆಯಲ್ಲಿ ಬಳಸುವ ಸಲಕರಣೆಗಳು, ಅಗ್ನಿ ನಂದಿಸುವ ಅಣಕು ಕಾರ್ಯಾಚರಣೆ ಇನ್ನಿತರ ಚಟುವಟಿಕೆಗಳನ್ನು ನಡೆಸಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಡಾ. ಮಹೇಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ. ರಮೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಆರ್. ಅನಿತಾ ಅವರು ಉಪಸ್ಥಿತರಿದ್ದರು.

ಕರೆಂಟು ಇಲ್ಲ, ಸೋಲಾರ್ ಲೈಟೂ ಇಲ್ಲ, ಅಧಿಕಾರಿಗಳೂ ಸ್ಪಂದಿಸಲ್ಲ

ಹನೂರು ವಿದ್ಯುತ್ ಜನಸಂಪರ್ಕ ಸಭೆಯಲ್ಲಿ ದೂರುಗಳ ಸುರಿಮಳೆ

ಹನೂರು, ಜೂ.14– ವಿದ್ಯುತ್ ಗ್ರಾಹಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ನೀಡುವ ಉದ್ದೇಶದಿಂದ ಪಟ್ಟಣದ ಚೆಸ್ಕಾಂ ಕಚೇರಿ ಆವರಣದಲ್ಲಿ ಕಾರ್ಯಪಾಲಕ ಎಂಜಿನಿಯರ್ ಶಹಿದಾ ಸಿದ್ದೀಕ್‌ರವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಯಿತು. ಈ ವೇಳೆ ದೂರುಗಳ ಸರಮಾಲೆಯೇ ಹರಿದುಬಂತು.

ಸಭೆಯಲ್ಲಿ ತಾಲೂಕು ರೈತ ಮುಖಂಡ ಚಂಗಡಿ ಕರಿಯಪ್ಪ ಮಾತನಾಡಿ, ಕಾಡಂಚಿನ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲು ಅರಣ್ಯ ಇಲಾಖೆ ಒಪ್ಪಿಗೆ ನೀಡುತ್ತಿಲ್ಲ. ಅಂತಹ ಕಡೆ ಸೋಲಾರ್ ದೀಪ ಅಳವಡಿಸಿದ್ದಾರೆ. ಅದು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಹೀಗಾಗಿ ತುಂಬಾ ತೊಂದರೆಯಾಗಿದೆ. ಕಾಡಂಚಿನ ಗ್ರಾಮಗಳಿಗೆ ಸಮಸ್ಯೆಯಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಕನಿಷ್ಠ 7 ಗಂಟೆ ನೀಡುತ್ತೀರಿ. ಆದರೆ ಅದು ಸಮರ್ಪಕವಾಗಿ ನೀಡುತ್ತಿಲ್ಲ. ಇದರಿಂದ ರೈತರು ಸಂಕಷ್ಟದಲ್ಲಿದ್ದಾರೆ. ವಿದ್ಯುತ್ ಸಮಸ್ಯೆಗಳ ಬಗ್ಗೆ ದೂರವಾಣಿ ಕರೆ ಮೂಲಕ ತಿಳಿಸಿದರೆ ಇಲಾಖೆಯವರು ಸರಿಯಾಗಿ ಸ್ಪಂದಿಸುವುದಿಲ್ಲ ಎಂದು ತಿಳಿಸಿದರು.

ಮತ್ತೊಬ್ಬ ರೈತ ಮುಖಂಡರಾದ ಬಸವರಾಜು ಮಾತನಾಡಿ, ಬಡವರಿಗೆ ನೀಡುವ ಉಚಿತ ವಿದ್ಯುತ್ ಯೋಜನೆಗಳಾದ ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ ಯೋಜನೆಯ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ. ಕಾಂಚಹಳ್ಳಿ ಅಜ್ಜಿಪುರ ಮತ್ತು ಬಸಪ್ಪನ ದೊಡ್ಡಿ ಗ್ರಾಮಗಳಲ್ಲಿ ಫಲಾನುಭವಿಗಳಿಂದ ಹಣ ವಸೂಲಿ ಮಾಡಿ ಮೀಟರ್‌ಗಳನ್ನೂ ಅಳವಡಿಸುತ್ತಾರೆ. ರೈತರು ಹೊಸ ಟಿ.ಸಿ.ಗೆ ಅರ್ಜಿ ನೀಡಿದರೆ ತುಂಬಾ ವಿಳಂಬ ಮಾಡುತ್ತಿದ್ದಾರೆ. ಅತಿ ಶೀಘ್ರವಾಗಿ ಟಿಸಿ ಅಳವಡಿಸುವ ಕೆಲಸ ಆಗಬೇಕು ಎಂದು ತಿಳಿಸಿದರು. ರೈತರ ಪಂಪ್‌ಸೆಟ್‌ಗಳಿಗೆ ರಾತ್ರಿ ಹೊತ್ತು ನೀಡುವ ವಿದ್ಯುತ್ ತಪ್ಪಿಸಿ ಸಾಧ್ಯವಾದಷ್ಟು ಹಗಲಿನ ವೇಳೆ ನೀಡಬೇಕು ಎಂದು ಮನವಿ ಮಾಡಿದರು.

25 ದಿನಗಳಿಂದ ವಿದ್ಯುತ್ ಇಲ್ಲದೆ ಬೆಳೆ ಒಣಗಿ ನಾಶವಾಗುತ್ತಿದೆ. ಈ ಬಗ್ಗೆ ಚೆಸ್ಕಾಂ ಅಧಿಕಾರಿಗಳ ಗಮನಕ್ಕೆ ತಂದರು ಸಹ ಅಧಿಕಾರಿಗಳು ಯಾವುದೇ ಕ್ರಮ ವಹಿಸುತ್ತಿಲ್ಲ ಎಂದು ಅಜ್ಜಿಪುರ ಗ್ರಾಮದ ಸುಬ್ರಹ್ಮಣ್ಯ ಆರೋಪಿಸಿದರು. ಸಮಸ್ಯೆಗಳನ್ನು ಆಲಿಸಿದ ಅಧಿಕಾರಿಗಳು, ಇನ್ನು ಮುಂದೆ ಹೀಗೆ ಆಗದಂತೆ ನೋಡಿಕೊಳ್ಳುತ್ತೇವೆ. ರೈತರಿಗೆ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳುತ್ತೇವೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರ ಶಾಹಿದಾ ಸಿದ್ದೀಕ್, ಸಹಾಯಕ ಕಾರ್ಯಪಾಲಕ ಅಭಿಯಂತರ ಶಂಕರ್, ರೈತ ಸಂಘದ ಅಧ್ಯಕ್ಷರಾದ ಚಂಗಡಿ ಕರಿಯಪ್ಪ, ಹಾಗೂ ಸಾರ್ವಜನಿಕರು ಮತ್ತು ರೈತರು ಹಾಜರಿದ್ದರು.

ಚಾ.ನಗರ ಸೆಸ್ಕ್ ಜನಸಂಪರ್ಕ ಸಭೆಯಲ್ಲೂ ಹರಿದು ಬಂದ ದೂರುಗಳು



ಚಾಮರಾಜನಗರ, ಜೂ.14– ನಗರದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಉಪ ವಿಭಾಗದಲ್ಲಿ ಇಂದು ನಡೆದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರು ಹಲವು ದೂರುಗಳನ್ನು ನೀಡಿ ಸಮಸ್ಯೆಗಳನ್ನು ಪರಿಹರಿಸುವಂತೆ ಮನವಿ ಮಾಡಿದರು.

ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಸುರೇಶ್ ವಾಜಪೇಯಿ ಮಾತನಾಡಿ, ಸರ್ಕಾರ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುವುದಾಗಿ ಹೇಳಿದೆ. ಅದರಲ್ಲಿ ಕೆಲವು ಗೊಂದಲ ಉಂಟಾಗಿದ್ದು ಪರಿಹರಿಸಬೇಕು, ಅಲ್ಲದೇ ರೈಲ್ವೆ ಬಡಾವಣೆಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ, ವಿದ್ಯುತ್ ಬಿಲ್ ಪಾವತಿ ಮಾಡದಿದ್ದವರಿಗೆ ಪಾವತಿಸಲು ಕಾಲಾವಕಾಶ ನೀಡದೇ ಸಂಪರ್ಕ ಕಡಿತ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಮಂಜುನಾಥ್ ಮಾತನಾಡಿ, ನಗರಸಭಾ ವ್ಯಾಪ್ತಿಯ ಹಲವು ವಾರ್ಡ್‌ಗಳಲ್ಲಿ ವಿದ್ಯುತ್ ಲೈನ್ ಹೋಗಿರುವ ಕಡೆ ಜಂಗಲ್ ಕಟಿಂಗ್ ಮಾಡಿರುವುದಿಲ್ಲ ಎಂದು ಆರೋಪಿಸಿ, ಸರಿಪಡಿಸಬೇಕೆಂದು ತಿಳಿಸಿದರು. ಕರಿನಂಜನಪುರದ ನಿವಾಸಿ ಗೋವಿಂದರಾಜು ಮಾತನಾಡಿ, ನಮ್ಮ ಊರಿನಲ್ಲಿ ಅನುಮೋದನೆ ಗೊಂಡಿರುವ ಲೇಔಟ್‌ನಲ್ಲಿ 15 ಮನೆಗಳನ್ನು ನಿರ್ಮಾಣ ಮಾಡಲಾಗಿದ್ದು ಎಲ್ಲರೂ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದೇವೆ, ನಮಗೆ ಇದರಿಂದ ಮೂರ್ನಾಲ್ಕು ಸಾವಿರ ವಿದ್ಯುತ್ ಬಿಲ್ ಬರುತ್ತಿದೆ, ಇದನ್ನು ಪಾವತಿಸಲು ಹೊರೆಯಾಗುತ್ತಿದೆ ಹೀಗಾಗಿ ಖಾಯಂ ಸಂಪರ್ಕ ನೀಡಲು ಕ್ರಮ ವಹಿಸುವಂತೆ ಮನವಿ ಮಾಡಿದರು. ಸಮಸ್ಯೆಗಳನ್ನು ಆಲಿಸಿದ ಸೆಸ್ಕ್‌ನ ಚಾಮರಾಜನಗರ ಕೊಡಗು ವೃತ್ತದ ಅಧೀಕ್ಷಕ ಇಂಜಿನಿಯರ್ ಸೋಮರಾಜ್ ಮಾತನಾಡಿ, ಈಗ ಬಂದಿರುವ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧ ಪಟ್ಟವರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಕಾರ್ಯ ನಿರ್ವಾಹಕ ಇಂಜಿನಿಯರ್ ವಸಂತ್‌ಕುಮಾರ್, ಎಇಇ ರಾಜು, ಪ್ರವೀಣ್ ಸೇರಿದಂತೆ ಇತರರು ಇದ್ದರು.

ವಡ್ಡಗೆರೆ ಪಿಣ್ಣೆಮಲ್ಲಪ್ಪನ ಮಾದಪ್ಪ ನಿಧನ



ಚಾಮರಾಜನಗರ, ಜೂ.14– ಗುಂಡ್ಲುಪೇಟೆ ತಾಲೂಕಿನ ವಡ್ಡಗೆರೆ ಗ್ರಾಮದ ನಿವಾಸಿ ಪಿಣ್ಣೆಮಲ್ಲಪ್ಪನ ಮಾದಪ್ಪ (90) ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ,ಪುತ್ರನನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ಗುರುವಾರ ನಡೆಯಲಿದೆ.

'ಶಕ್ತಿ' ಕಮಾಲ್: ಐರಾವತ, ಅಂಬಾರಿ, ರಾಜಹಂಸ, ಇ-ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಇಳಿಮುಖ



ಮೈಸೂರು, ಜೂ.14(ಆರ್‌ಕೆ)-'ಶಕ್ತಿ' ಯೋಜನೆಯನ್ವಯ ಕೆಎಸ್‌ಆರ್‌ಟಿಸಿ ಸಾಮಾನ್ಯ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸಿರುವುದರಿಂದ ಸಂಸ್ಥೆಯ ಐರಾವತ, ಅಂಬಾರಿ, ರಾಜಹಂಸ, ಎಲೆಕ್ಟ್ರಿಕ್ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಮೈಸೂರು ನಗರ, ಮೈಸೂರು-ಬೆಂಗಳೂರು ನಡುವೆ ಸಂಚರಿಸುತ್ತಿರುವ ಕೆಎಸ್‌ಆರ್‌ಟಿಸಿ ಹವಾನಿಯಂತ್ರಿತ ಮಲ್ಟಿ ಆಕ್ಸೆಲ್ ಬಸ್‌ಗಳಲ್ಲಿ ದುಬಾರಿ ಹಣ ತೆತ್ತು ಪ್ರಯಾಣಿಸುತ್ತಿದ್ದ ಮಹಿಳೆಯರು, ಯುವತಿಯರ ಪೈಕಿ ಕೆಲವರು, ಉಚಿತ ಸೇವೆ ಇರುವ ಸಾಮಾನ್ಯ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸಲಾರಂಭಿಸಿದ್ದಾರೆ.

ಸಾಫ್ಟ್‌ವೇರ್ ಕಂಪನಿ ಅಧಿಕಾರಿಗಳು, ಉದ್ಯೋಗಿಗಳು, ಸರ್ಕಾರಿ ಅಧಿಕಾರಿಗಳು, ಕೈಗಾರಿಕೋದ್ಯಮಿಗಳು, ಶ್ರೀಮಂತ ವರ್ಗದವರು ಎಂದಿನಂತೆ ಐಷಾರಾಮಿ ಸಾರಿಗೆ ಬಸ್‌ನಲ್ಲೇ ಓಡಾಡುತ್ತಿದ್ದಾರೆ. ಆದರೆ ಆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಕೆಲ ಮಧ್ಯಮ ವರ್ಗದ ಮಹಿಳೆಯರು ಇದೀಗ ಸಾಮಾನ್ಯ ಬಸ್‌ಗಳಲ್ಲಿ ಉಚಿತವಾಗಿ ಓಡಾಡಲಾರಂಭಿಸಿದ್ದಾರೆ. ಪರಿಣಾಮ ಮೈಸೂರು ಮತ್ತು ಬೆಂಗಳೂರು ನಗರ ಬಸ್ ನಿಲ್ದಾಣ, ಸ್ಯಾಟಲೈಟ್ ಬಸ್ ಸ್ಟ್ಯಾಂಡ್‌ಗಳಲ್ಲಿ ಆಸನ ಭರ್ತಿಯಾಗಲು ಕಾಯುವಂತಾಗಿದೆಯಲ್ಲದೆ, ಬಸ್‌ನ ಬಹುತೇಕ ಆಸನಗಳು ಪುರುಷರಿಂದ ಭರ್ತಿಯಾಗುತ್ತಿವೆ. ಅಲ್ಲದೇ ಐಷಾರಾಮಿ ಬಸ್‌ಗಳಿಗೆ ಹೊರಗೆ ನಿಂತು ಚಾಲಕ, ಕಂಡಕ್ಟರ್, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಪ್ರಯಾಣಿಕರನ್ನು ಕೂಗಿ ಕರೆಯುವಂತಾಗಿದೆ. ಅದೇ ಆವರಣದ ಸಾಮಾನ್ಯ ಬಸ್‌ಗಳಿಗೆ ಬಲು ಬೇಗ ಆಸನಗಳು ಭರ್ತಿಯಾಗುತ್ತಿವೆ. ದುಬಾರಿ ದರದ ಟಿಕೆಟ್ ಪಡೆದು ಪ್ರಯಾಣಿಸುವ ಬದಲು ಸಾಮಾನ್ಯ ಬಸ್‌ನಲ್ಲಿ ಉಚಿತವಾಗಿ ತಮ್ಮ ಸ್ಥಳಗಳನ್ನು ತಲುಪಬಹುದಾಗಿರುವುದರಿಂದ ಮಹಿಳೆಯರು 'ಶಕ್ತಿ' ಬಳಸಿಕೊಳ್ಳುತ್ತಿದ್ದಾರೆ.

ಮೂರನೇ ಪುಟದಿಂದ

ಜು.1ರಿಂದ 'ಅನ್ನಭಾಗ್ಯ' ಅನುಮಾನ

ಇದಾದ ನಂತರ ಕೇಂದ್ರ ಸರ್ಕಾರ ರಾಜಕೀಯ ನಿರ್ಧಾರ ತೆಗೆದುಕೊಂಡಿದೆ ಎಂದು ಮುಖ್ಯಮಂತ್ರಿಗಳು ಆಕ್ರೋಶ ವ್ಯಕ್ತಪಡಿಸಿದರು. ಈ ಮೊದಲು ನಮ್ಮ ಬೇಡಿಕೆ ಪ್ರಮಾಣದ ಅಕ್ಕಿಯನ್ನು ಸಾಗಾಣಿಕೆ ವೆಚ್ಚ ಸೇರಿ ಪ್ರತಿ ಕೆಜಿಗೆ 36 ರೂ. 60ಪೈಸೆ ದರದಲ್ಲಿ ಪೂರೈಸುವುದಾಗಿ ಹೇಳಿದ್ದ ಕೇಂದ್ರ ಆಹಾರ ನಿಗಮ, ನಂತರ ಕೈಚೆಲ್ಲಿದೆ.

ಕೇಂದ್ರ ಸರ್ಕಾರ ಈ ಮೊದಲೇ ನಮ್ಮ ಹೆಚ್ಚುವರಿ ಬೇಡಿಕೆಯನ್ನು ನೀಡಲಾಗದು ಎಂದು ತಿಳಿಸಿದ್ದರೆ, ನಾವು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆವು. ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂಬ ಉದ್ದೇಶದಿಂದ ಒಪ್ಪಿಗೆ ನೀಡಿ, ನಂತರ ಕೈಚೆಲ್ಲಿದ್ದಾರೆ.

ಇದು ರಾಜಕೀಯ ದುರುದ್ದೇಶದಿಂದ ಕೂಡಿದೆ. ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯದ ಜನತೆಗೆ ನೀಡಿದ್ದ ಭರವಸೆಯಂತೆ ಮಾಸಿಕ ಪ್ರತಿ ಯುನಿಟ್‌ಗೆ ಐದು ಕೆಜಿ ಬದಲು ಹತ್ತು ಕೆಜಿ ಆಹಾರ ಧಾನ್ಯ ನೀಡಲು ಬದ್ಧರಾಗಿದ್ದೇವೆ.

ರಾಷ್ಟ್ರದಲ್ಲಿ ಭತ್ತ ಬೆಳೆಯುವ ರಾಜ್ಯಗಳನ್ನು ಸಂಪರ್ಕಿಸಿ, ಅವರಿಂದ ನಮಗೆ ಅಗತ್ಯವಿರುವ ಅಕ್ಕಿಯನ್ನು ಖರೀದಿ ಮಾಡಲು ಮುಂದಾಗಿದ್ದೇವೆ. ಈಗಾಗಲೇ ತೆಲಂಗಾಣ ಹಾಗೂ ಛತ್ತೀಸ್‌ಘಡ ರಾಜ್ಯ ಸರ್ಕಾರವನ್ನು ಸಂಪರ್ಕಿಸಿ, ಅವರಿಂದ ನಮಗೆ ಅಗತ್ಯವಿರುವ ಅಕ್ಕಿಯನ್ನು ಖರೀದಿಸಲು ಮಾತುಕತೆ ಆರಂಭಿಸಿದ್ದೇವೆ.

ಪಂಜಾಬ್ ರಾಜ್ಯವನ್ನು ಸಂಪರ್ಕಿಸಿದ್ದು, ಅವರು ನಮ್ಮಲ್ಲಿ ಹೆಚ್ಚುವರಿಯಾಗಿ ಅಕ್ಕಿ ಇಲ್ಲ ಎಂದು ಹೇಳಿದ್ದಾರೆ. ಇಷ್ಟಾದರೂ ಉಳಿದ ರಾಜ್ಯಗಳಲ್ಲಿ ಅಕ್ಕಿ ಖರೀದಿಸುವ ಕೆಲಸಕ್ಕೆ ಚಾಲನೆ ನೀಡಿದ್ದೇವೆ. ಜುಲೈ 1 ರಿಂದ ನಮ್ಮ ಗ್ಯಾರಂಟಿ ಯೋಜನೆಯಡಿ ಆಹಾರ ಧಾನ್ಯ ವಿತರಿಸುವ ತೀರ್ಮಾನ ಕೈಗೊಂಡಿದ್ದೆವು. ಎಫ್‌ಸಿಐಗೆ ಪತ್ರ ಬರೆದು, ಅವರ ಅನುಮತಿಯು ದೊರೆತಿತ್ತು. ನಮಗೆ ಹೆಚ್ಚುವರಿಯಾಗಿ ಮಾಸಿಕ 2.28 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಅಗತ್ಯವಿದ್ದು, ಅದು ಪೂರ್ಣ ಪ್ರಮಾಣದಲ್ಲಿ ಪೂರೈಸುವುದಾಗಿ ತಿಳಿಸಿ, ನಂತರ ಕೇಂದ್ರ ಮಧ್ಯೆ ಪ್ರವೇಶಿಸಿ, ರಾಜಕೀಯ ಷಡ್ಯಂತರ ಮಾಡಿದೆ.

ಅವರು ಏನೇ ಷಡ್ಯಂತರ ಮಾಡಿದರೂ ನಮ್ಮ ಭರವಸೆಯನ್ನು ಈಡೇರಿಸಿಯೇ ತೀರಿಸುತ್ತೇವೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಹೆಚ್ಚುವರಿಯಾಗಿ ಆಹಾರ ಧಾನ್ಯ ನೀಡುತ್ತೇವೆ ಎಂದು ತಿಳಿಸಿದರು. ಜೂನ್ 13 ರಂದು ಭಾರತ ಸರ್ಕಾರದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯವು ಭಾರತೀಯ ಆಹಾರ ನಿಗಮಕ್ಕೆ ಪತ್ರ ಬರೆದು 15 ಲಕ್ಷ ಮೆ.ಟನ್ ಗೋಧಿ ಹಾಗೂ ಅಕ್ಕಿಯನ್ನು ತೆರೆದ ಮಾರುಕಟ್ಟೆಯಲ್ಲಿ ಮಾರಾಟ ಯೋಜನೆಯಡಿ (ಒ.ಎಂ.ಎಸ್.ಎಸ್‌ಡಿ) ಮಾರಾಟ ಮಾಡಲು ಸೂಚಿಸಿದೆ. ಅಲ್ಲದೆ ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿ, ಇತರ ರಾಜ್ಯಗಳಿಗೆ ಮಾರಾಟ ಮಾಡುವುದನ್ನು ಸ್ಥಗಿತಗೊಳಿಸುವಂತೆ ಸೂಚಿಸಲಾಗಿರುವ ಪತ್ರದ ವಿವರಗಳನ್ನು ಓದಿ ಹೇಳಿದ ಮುಖ್ಯಮಂತ್ರಿಗಳು, ಕೇಂದ್ರ ಸರ್ಕಾರ ರಾಜಕೀಯವಾಗಿ ನಿರ್ಧಾರ ಕೈಗೊಂಡಿದೆ ಎಂದು ಆರೋಪಿಸಿದರು.

ಎಫ್.ಸಿ.ಐ. ಒಪ್ಪಿಗೆ ಪತ್ರದ ಆಧಾರದ ಮೇಲೆ ಜುಲೈ 1 ರಿಂದ ಜಾರಿ ಮಾಡಲಾಗುವುದು ಎಂದು ಘೋಷಿಸಿದೆವು. ಎಫ್.ಸಿ.ಐ ನ ಪ್ರಧಾನ ವ್ಯವಸ್ಥಾಪಕ ಹರೀಶ್ ಎಂಬುವರು 7 ಲಕ್ಷ ಟನ್ ಅಕ್ಕಿ ಸಂಗ್ರಹ ಇದೆ ಎಂದು ತಿಳಿಸಿದ್ದಾರೆ. ಅನ್ನಭಾಗ್ಯ ಕಾರ್ಯಕ್ರಮವನ್ನು ಜಾರಿಗೊಳಿಸದೇ ಇರುವಂತೆ ಅಡ್ಡಿಪಡಿಸುವುದು ಇದರ ಹಿಂದಿನ ಉದ್ದೇಶ ಎಂದು ಆರೋಪಿಸಿದರು. ನಾಳೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ತೆಲಂಗಾಣ ಮುಖ್ಯಮಂತ್ರಿಗಳನ್ನು ಭೇಟಿಯಾಗಲಿದ್ದಾರೆ. ಅಂತೆಯೇ ಛತ್ತೀಸ್‌ಗಢ ರಾಜ್ಯದಿಂದಲೂ ಲಭ್ಯವಿರುವ ಅಕ್ಕಿಯ ಮಾಹಿತಿ ಲಭಿಸಲಿದೆ. ನಾಳೆ ಸಂಜೆಯೊಳಗೆ ಒಂದು ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಆಶಾಭಾವ ವ್ಯಕ್ತಪಡಿಸಿದರು.

ಅಕ್ಕಿ ಇಟ್ಟುಕೊಂಡು ಕೊಡಲಾಗುವುದಿಲ್ಲ ಎಂದರೆ ಇವರನ್ನು ಬಡವರ ವಿರೋಧಿಗಳು ಎಂದು ಕರೆಯದೇ ಬೇರೇನೆಂದು ಕರೆಯಬೇಕು. ಕೇಂದ್ರ ಸರ್ಕಾರ ಉಚಿತವಾಗಿಯೇನೂ ಅಕ್ಕಿ ನೀಡುವುದಿಲ್ಲ. ನಾವು ಹಣ ನೀಡಿ ಪಡೆಯುವುದು. ಇತರರಿಗೆ ಕೊಡುವ ರೀತಿಯಲ್ಲಿ ನಮಗೂ ಕೊಡುತ್ತಿದ್ದರು. ಆದರೆ ಈಗ ಕರ್ನಾಟಕ ರಾಜ್ಯ ಸರ್ಕಾರಕ್ಕೆ ನೀಡುವುದಿಲ್ಲ ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಈಗಲೂ ನಾವು ಪ್ರಯತ್ನ ಮಾಡುತ್ತಿದ್ದೇವೆ. ಪುನಃ ಮನವಿ ಮಾಡುವುದು ಇದ್ದೇ ಇರುತ್ತದೆ. ಆದರೆ ಈ ರೀತಿ ಮಾಡಿರುವುದರಿಂದ ಇದೊಂದು ಷಡ್ಯಂತ್ರ ಎಂದೇ ಪರಿಗಣಿಸಬೇಕಾಗುತ್ತದೆ ಎಂದರು.

ಅರ್ಜಿ ಸಲ್ಲಿಕೆ ದಿನಾಂಕ ಮುಂದೂಡಿಕೆ?

ಮುಂದೂಡಿಕೆ ಮಾಡುವ ಸಾಧ್ಯತೆಯಿದೆ ಎಂದು ಸರ್ಕಾರದ ಉನ್ನತ ಅಧಿ ಕಾರಿಗಳ ಮೂಲದಿಂದ ತಿಳಿದುಬಂದಿದೆ. ರಾಜ್ಯದಲ್ಲಿ 200 ಯೂನಿಟ್ ಉಚಿತ ವಿದ್ಯುತ್ ಪಡೆಯುವ ಗೃಹ ಜ್ಯೋತಿ ಯೋಜನೆಗೆ ಇದೇ ತಿಂಗಳು 15 ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಹೇಳಿದ್ದರು. ಆದರೆ, ಈಗ ದಿನಾಂಕ ವನ್ನು ಮುಂದೂಡಿಕೆ ಮಾಡುವ ಸಾಧ್ಯತೆ ಕಂಡುಬರುತ್ತಿದೆ. ಈ ಹಿನ್ನೆಲೆ ಯಲ್ಲಿ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿದ್ದು, ಸಭೆಯ ನಂತರ ಅಧಿಕೃತ ಮಾಹಿತಿ ಹೊರಬೀಳಲಿದೆ.

ತಕ್ಷಣ 50 ಕೋಟಿ ಬಿಡುಗಡೆ

ಮೈ ಶುಗರ್ಸ್ ಪುನಶ್ಚೇತನಕ್ಕೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿತ್ತು. 37 ಸಾವಿರ ಕಬ್ಬು ಬೆಳೆಗಾರ ರೈತರಿಂದ 5 ಲಕ್ಷ ಟನ್ ಕಬ್ಬು ಸರಬರಾಜು ಮಾಡುವ ಒಪ್ಪಂದವಾಗಿತ್ತು. ಈ ಒಪ್ಪಂದದಂತೆ ರೈತರಿಗೆ ಸಕಾಲದಲ್ಲಿ ಹಣ ಒದಗಿಸುವ ಅಗತ್ಯವಿದೆ ಎಂದು ನಿಯೋಗ ಮನವಿ ಮಾಡಿತ್ತು. ನಿಯೋಗದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಕೊಟ್ಟ ಮಾತಿನಂತೆ ತಕ್ಷಣಕ್ಕೆ 50 ಕೋಟಿ ರೂ ಬಿಡುಗಡೆ ಆಗಿದೆ. ನುಡಿದಂತೆ ನಡೆದ ಮುಖ್ಯಮಂತ್ರಿಗಳಿಗೆ ನಿಯೋಗ ಮತ್ತು ರೈತ ಸಮೂಹ ಅಭಿನಂದನೆ ಸಲ್ಲಿಸಿದೆ ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳೀಗೌಡ ತಿಳಿಸಿದ್ದಾರೆ.

ಪಾಸ್ ಅವಧಿ ವಿಸ್ತರಿಸಿದ 'ಕೆಎಸ್‌ಆರ್‌ಟಿಸಿ'

ಕಾಲೇಜು ವಿದ್ಯಾರ್ಥಿಗಳು ಕಳೆದ ಸಾಲಿನ (2022-23) ಬಸ್ ಪಾಸ್‌ನೊಂದಿಗೆ ಅಥವಾ ಪ್ರಸ್ತುತ ಸಾಲಿನಲ್ಲಿ ಶಾಲಾ / ಕಾಲೇಜುಗಳಿಗೆ ಪಾವತಿಸಿರುವ ರಸೀದಿ ಜೊತೆಗೆ ನಿಗಮದ ಬಸ್ಸುಗಳಲ್ಲಿ ಸಂಬಂಧಪಟ್ಟ ಮಾರ್ಗದಲ್ಲಿ ಅಥವಾ ಹೊಸ ವಿಳಾಸದಲ್ಲಿರುವ ಶಾಲಾ-ಕಾಲೇಜುಗಳಿಗೆ ತೆರಳಲು ಜೂನ್ 30ರವರೆಗೆ ನಿಗಮದ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಈ ಹಿಂದಿನ ವರ್ಷದ ಪಾಸನ್ನು ಹಾಜರುಪಡಿಸಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರು

ಅಪರಾಧ ಪ್ರಕರಣಗಳಲ್ಲಿ ವೈಜ್ಞಾನಿಕ ಸಾಕ್ಷ್ಯ ಸಂಗ್ರಹಕ್ಕೆ ರಾಜ್ಯದಲ್ಲಿ 196 ಎಸ್‌ಓಸಿ ಅಧಿಕಾರಿಗಳ ನೇಮಕ

ಮೈಸೂರು, ಜೂ. 14(ಆರ್‌ಕೆ)- ಅಪರಾಧ ಪ್ರಕರಣಗಳಲ್ಲಿ ವೈಜ್ಞಾನಿಕ ಸಾಕ್ಷ್ಯ ಸಂಗ್ರಹಿಸುವ ಸಲುವಾಗಿಯೇ ನೇಮಕವಾಗಿರುವ ಅಪರಾಧ ಸ್ಥಳ ಪರಿಶೀಲನಾ (ಸೀನ್ ಆಫ್ ಕ್ರೈಂ-ಎಸ್‌ಓಸಿ) ಅಧಿಕಾರಿಗಳು ಮೈಸೂರಲ್ಲಿ ಮಂಗಳವಾರ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಗೃಹ ಇಲಾಖೆಯು ಕೆಪಿಎಸ್‌ಸಿ ಮೂಲಕ ವರ್ಷದ ಹಿಂದೆ ಎಲ್ಲಾ ಜಿಲ್ಲೆಗಳಿಗೆ ಅಗತ್ಯವಿರುವ 196 ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದು, ಆ ಪೈಕಿ ಮೈಸೂರು ನಗರ ಪೊಲೀಸ್ ಕಮೀಷ್ನರೇಟ್‌ಗೆ ನಿಯೋಜನೆಗೊಂಡಿರುವ ಬಿಎಸ್‌ಸಿ ಪದವೀಧರರಾದ ಕೆ.ಎನ್. ಭಾರ್ಗವ್, ಬಿ.ಎಸ್. ಸುಭಾಷ್, ಜಿಲ್ಲಾ ಪೊಲೀಸ್ ಘಟಕದ ಕೆ. ಮೋಹಿತ್ ಕುಮಾರ್ ಹಾಗೂ ಅಭಿಷೇಕ್ ಮಂಗಳವಾರ ಕರ್ತವ್ಯಕ್ಕೆ ಹಾಜರಾದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಕೆಎನ್.ಭಾರ್ಗವ್ ಹಾಗೂ ಬಿ.ಎಸ್. ಸುಭಾಷ್ ವರದಿ ಮಾಡಿಕೊಂಡರೆ, ಮೋಹಿತ್ ಕುಮಾರ್ ಮತ್ತು ಅಭಿಷೇಕ್ ಎಸ್ಪಿ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ



ಕೆ.ಎನ್.ಭಾರ್ಗವ್



ಬಿ.ಎಸ್.ಸುಭಾಷ್



ಕೆ.ಮೋಹಿತ್‌ಕುಮಾರ್



ಅಭಿಷೇಕ್

(ಕೆಪಿಎಸ್‌ಸಿ) ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಪೊಲೀಸ್ ಇಲಾಖೆಗೆ ಆಯ್ಕೆಯಾದ 196 ಎಸ್‌ಓಸಿ ಅಧಿಕಾರಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ತಲಾ ಇಬ್ಬರಂತೆ ನಿಯೋಜನೆ ಮಾಡಲಾಗಿದೆ. ಈ ಅಧಿಕಾರಿಗಳಿಗೆ ಗುಜರಾತ್‌ನ ಗಾಂಧಿ ನಗದ ನ್ಯಾಷನಲ್ ಫೋರೆನ್ಸಿಕ್ ಸೈನ್ಸಸ್ ವಿಶ್ವವಿದ್ಯಾನಿಲಯ, ಹೈದರಾಬಾದ್‌ನ ಸೆಂಟ್ರಲ್ ಫೋರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ ಮತ್ತು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ)ಯಲ್ಲಿ ಅಪರಾಧ ಸ್ಥಳದಲ್ಲಿ ದೊರೆಯುವ ವೈಜ್ಞಾನಿಕ ಸಾಕ್ಷ್ಯಗಳನ್ನು ಸಂಗ್ರಹಿಸಿ ತನಿಖಾಧಿಕಾರಿಗಳಿಗ ವರದಿ ನೀಡುವ ಬಗ್ಗೆ 8 ತಿಂಗಳ ತರಬೇತಿ ನೀಡಲಾಗಿದೆ.

ಅಪರಾಧ ಸಂಭವಿಸಿದ ತಕ್ಷಣ ಸ್ಥಳಕ್ಕೆ ಧಾವಿಸಿ, ಅಲ್ಲಿ ದೊರೆಯುವ ಸಾಕ್ಷ್ಯ, ವೈಜ್ಞಾನಿಕ ಅಂಶಗಳ ಸಂಗ್ರಹಿಸುವುದು, ಸಿಡಿಆರ್ ಹಾಗೂ ಅಪರಾಧ ಮತ್ತು ಆರೋಪಿಗಳ ಸುಳಿವಿನ ಪೂರಕ ಮಾಹಿತಿಯನ್ನು ಆ ವ್ಯಾಪ್ತಿಯ ಪೊಲೀಸ್ ಠಾಣಾ ತನಿಖಾಧಿಕಾರಿಗಳಿಗೆ ನೀಡಲು ಸೂಕ್ತ ತರಬೇತಿ ನೀಡಿ ಸಜ್ಜುಗೊಳಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ವೈಜ್ಞಾನಿಕ ಸಾಕ್ಷ್ಯಾಧಾರ ಸಂಗ್ರಹಿಸುವುದರಿಂದ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗುವಂತೆ ಪರಿಣಾಮಕಾರಿ ತನಿಖೆ ಸಾಧ್ಯವಿದೆ. ಮೈಸೂರು ನಗರ ಪೊಲೀಸ್ ಘಟಕಕ್ಕೆ ನಿಯೋಜನೆಗೊಂಡಿರುವ ಭಾರ್ಗವ್ ಮತ್ತು ಸುಭಾಷ್, ಕರ್ತವ್ಯಕ್ಕೆ ವರದಿ ಮಾಡಿಕೊಂಡ ಮರುದಿನವೇ ಇಂದು ಮೈಸೂರಿನ ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಸಿಗ್ನಲ್ ಲೈಟ್ ಸರ್ಕಲ್ ಸಮೀಪವಿರುವ ಕೆಎಸ್‌ಆರ್‌ಟಿಸಿ ವಸತಿ ಬಡಾವಣೆಯಲ್ಲಿ ನಡೆದ ಮಹಿಳೆ ಕೊಲೆ ಪ್ರಕರಣದ ಸ್ಥಳಕ್ಕೆ ತೆರಳಿ, ವೈಜ್ಞಾನಿಕ ಸಾಕ್ಷ್ಯಗಳನ್ನು ಕಲೆಹಾಕಿದರು.

ಹಲವು ಅಪರಾಧ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸಾಕ್ಷ್ಯಗಳನ್ನು ಸಂಗ್ರಹಿಸಿ ದೋಷಾರೋಪಣಾ ಪಟ್ಟಿ (ಚಾರ್ಜ್‌ಶೀಟ್)ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರೂ, ಪ್ರತಿಕೂಲ ಸಾಕ್ಷಿಯಿಂದಾಗಿ ನ್ಯಾಯಾಧೀಶರ ಮುಂದೆ ಕೃತ್ಯವನ್ನು ಸಾಬೀತುಪಡಿಸಲಾಗದೇ ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗುತ್ತಿದ್ದು, ತನಿಖಾಧಿಕಾರಿಗಳ ಶ್ರಮ ವ್ಯರ್ಥವಾಗಿ ಪೊಲೀಸರಿಗೆ ಹಿನ್ನಡೆಯಾಗುತ್ತಿತ್ತು.

ಅದನ್ನು ಮನಗಂಡು ಪ್ರತ್ಯಕ್ಷ ಸಾಕ್ಷಿಗಳು ಏನೇ ಹೇಳಿದರೂ ವೈಜ್ಞಾನಿಕ ಸಾಕ್ಷ್ಯವನ್ನು ಪರಿಗಣಿಸಿ ತೀರ್ಪು ನೀಡುವುದರಿಂದ ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿಗಳು ಸಂಗ್ರಹಿಸುವ ಸಾಕ್ಷ್ಯಗಳು ತನಿಖಾಧಿಕಾರಿಗಳಿಗೆ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳ ಪತ್ತೆಗೆ ಹಾಗೂ ಅವರಿಗೆ ಶಿಕ್ಷೆ ವಿಧಿಸಲು ಸಹಕಾರಿಯಾಗಲಿದೆ.

ಇಂದು ನಾಲ್ವರು ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿಗಳಿಗೆ, ತಮ್ಮ ಕರ್ತವ್ಯ ನಿರ್ವಹಣೆ, ಪೊಲೀಸ್ ಇಲಾಖೆ, ಫೋರೆನ್ಸಿಕ್ ಸೈನ್ಸ್ ಲ್ಯಾಬ್‌ನೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಅಪರಾಧ ಪ್ರಕರಣಗಳ ತನಿಖೆಗೆ ಸಹಾಯವಾಗುವಂತೆ ಕರ್ತವ್ಯ ನಿರ್ವಹಿಸಬೇಕೆಂದು ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್, ಎಸ್ಪಿ ಸೀಮಾ ಲಾಟ್ಕರ್ ಮತ್ತು ಅಡಿಷನಲ್ ಎಸ್ಪಿ ಡಾ. ಬಿ.ಎನ್. ನಂದಿನಿ, ಸೂಚಿಸಿ, ಶುಭ ಕೋರಿದರು.

ಮೈಸೂರು ಜಿಲ್ಲಾ ಪೊಲೀಸರಿಂದ ಮೂವರು ಖದೀಮರ ಬಂಧನ

7 ಪ್ರಕರಣ ಪತ್ತೆ, 18 ಲಕ್ಷ ರೂ. ಮೌಲ್ಯದ 289 ಗ್ರಾಂ ಚಿನ್ನ, 2.4 ಕೆ.ಜಿ. ಬೆಳ್ಳಿ ಪದಾರ್ಥ ವಶ



ಮೈಸೂರು, ಜೂ.14(ಆರ್‌ಕೆ)- ಮೂವರು ಮನೆಗಳ್ಳರನ್ನು ಬಂಧಿಸಿರುವ ಮೈಸೂರು ಜಿಲ್ಲಾ ಪೊಲೀಸರು, 18 ಲಕ್ಷ ರೂ. ಬೆಲೆ ಬಾಳುವ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಹುಣಸೂರಿನ ಗೋಪಿಕೃಷ್ಣ(58), ಚೆನ್ನಪಟ್ಟಣ ನಿವಾಸಿಗಳಾದ ಮಂಜುನಾಥ್ ಅಲಿಯಾಸ್ ಚೋಟಿ ಮಂಜ(45) ಹಾಗೂ ಮುರುಗೇಶ ಅಲಿಯಾಸ್ ಅಯ್ಯಪ್ಪ ಅಲಿಯಾಸ್ ಕಪ್ಪೆ(40) ಬಂಧಿತ ಆರೋಪಿಗಳಾಗಿದ್ದು, ಅವರಿಂದ 289 ಗ್ರಾಂ ಚಿನ್ನಾಭರಣ ಹಾಗೂ 2.4 ಕೆ.ಜಿ. ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಹುಣಸೂರು ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾರುತಿ ಬಡಾವಣೆ ಮತ್ತು ಮಂಜುನಾಥ ಲೇಔಟ್‌ಗಳಲ್ಲಿ ಯಾರೂ ಇಲ್ಲದ ವೇಳೆ ಮನೆಗಳ ಬೀಗ ಮುರಿದು ಚಿನ್ನ ಮತ್ತು ಬೆಳ್ಳಿ ಆಭರಣ ಕಳವಾಗಿತ್ತು. ಪ್ರಕರಣದ ಆರೋಪಿಗಳ ಪತ್ತೆಗಾಗಿ ಹುಣಸೂರು ಉಪ ವಿಭಾಗದ ಡಿವೈಎಸ್ಪಿ ಎಂ.ಕೆ.ಮಹೇಶ ನೇತೃತ್ವದಲ್ಲಿ ಹುಣಸೂರು ಟೌನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಸ್.ಎಂ.ದೇವೇಂದ್ರಪ್ಪ ಅವರನ್ನೊಳಗೊಂಡ ತಂಡ ರಚಿಸಲಾಗಿತ್ತು.

ಆರೋಪಿಗಳು ಹುಣಸೂರಲ್ಲಿ 5, ಪಿರಿಯಾಪಟ್ಟಣ ಮತ್ತು ಕೆ.ಆರ್.ನಗರದಲ್ಲಿ ತಲಾ 1 ಮನೆಯಲ್ಲಿ ಕಳವು ಮಾಡಿದ್ದರು ಎಂಬುದು ಬಂಧಿತರನ್ನು ವಿಚಾರಣೆಗೊಳಪಡಿಸಿದಾಗ ತಿಳಿದು ಬಂತು. ಆರೋಪಿಗಳ ಪೈಕಿ ಚೆನ್ನಪಟ್ಟಣದ ಮುರುಗೇಶ ಮನೆಗಳವು ಪ್ರಕರಣಗಳಲ್ಲಿ ಬಂಧಿತನಾಗಿ 6 ವರ್ಷಗಳ ಕಾಲ ಮತ್ತು ಹುಣಸೂರಿನ ಗೋಪಿಕೃಷ್ಣ 12 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದರು.

ಶಿಕ್ಷೆ ಮುಗಿಸಿ ಹೊರ ಬಂದ ನಂತರವೂ ಈ ಇಬ್ಬರೂ ಆಸಾಮಿಗಳು ಹಳೇ ಚಾಳಿಯನ್ನು ಮುಂದುವರೆಸಿ ಮೇ ಮಾಹೆಯಲ್ಲಿ ಹುಣಸೂರು, ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರದಲ್ಲಿ ಮನೆ ಬೀಗ ಮುರಿದು ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿದ್ದರು ಎಂದು ಸೀಮಾ ಲಾಟ್ಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಬೀಗ ಹಾಕಿ ಹೊರಗೆ ಹೋಗಿದ್ದ ಮನೆಗಳನ್ನೇ ಟಾರ್ಗೆಟ್ ಮಾಡಿ ರಾತ್ರಿ ವೇಳೆ ಕೃತ್ಯ ನಡೆಸುತ್ತಿದ್ದ ಮೂವರು ಐಷಾರಾಮಿ ಜೀವನ ನಡೆಸುತ್ತಿದ್ದರು. ತನಿಖಾ ತಂಡದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೂವರು ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಎಸ್ಪಿ ಸೀಮಾ ಲಾಟ್ಕರ್ ಸೂಚನೆಯಂತೆ, ಅಡಿಷನಲ್ ಎಸ್ಪಿ ಡಾ. ಬಿ.ಎನ್.ನಂದಿನಿ ಅವರ ಮಾರ್ಗದರ್ಶನದಲ್ಲಿ ಹಾಗೂ ಡಿವೈಎಸ್ಪಿ ಎಂ.ಕೆ.ಮಹೇಶ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಹುಣಸೂರು ಟೌನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಸ್.ಎಂ.ದೇವೇಂದ್ರಪ್ಪ, ಎಎಸ್‌ಐ ಪುಟ್ಟನಾಯಕ, ಸಿಬ್ಬಂದಿಗಳಾದ ಹೆಚ್.ಎನ್.ಅರುಣ್, ಆರ್.ಪ್ರಭಾಕರ್, ಡಿ.ಎ.ಇರ್ಫಾನ್, ಎಸ್.ಎ.ಮನೋಹರ್, ರಘು, ಜಿ.ಕೆ.ಮಂಜುನಾಥ್, ಅಹಮದ್ ಅಲಿ, ನಾಗೇಂದ್ರ, ಅಲೀಂ ಪಾಷ, ತಿರುಮಲ್ಲೇಶ, ವಸಂತಕುಮಾರ್, ಸತೀಶ್, ಲಿಂಗರಾಜಯ್ಯ ಅವರು ಪಾಲ್ಗೊಂಡಿದ್ದರು.

ಕತ್ತು ಹಿಸುಕಿ ಪತ್ನಿ ಹತ್ಯೆಗೈದ ಪತಿ

ಮೈಸೂರಿನ ಆಲನಹಳ್ಳಿಯಲ್ಲಿ ಮುಂಜಾನೆ ಘಟನೆ, ಕೆಲವೇ ಗಂಟೆಗಳಲ್ಲಿ ಆರೋಪಿ ಸೆರೆ

ಮೈಸೂರು, ಜೂ.14(ಆರ್‌ಕೆ)- ಮಲಗಿದ್ದಲ್ಲೇ ಪತ್ನಿಯನ್ನು ಕತ್ತು ಹಿಸುಕಿ ಪತಿ ಹತ್ಯೆಗೈದಿರುವ ಘಟನೆ ಮೈಸೂರಿನ ಆಲನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ.

ಮೈಸೂರಿನ ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಸಿಗ್ನಲ್ ಲೈಟ್ ಜಂಕ್ಷನ್ ಸಮೀಪವಿರುವ ಕೆಎಸ್‌ಆರ್‌ಟಿಸಿ ಬಡಾವಣೆ ನಿವಾಸಿ ಲೋಕೇಶ್ ಆರಾಧ್ಯ ಅವರ ಪತ್ನಿ ಪಲ್ಲವಿ(26) ಹತ್ಯೆಯಾದವರು. 7 ವರ್ಷದ ಗಂಡು ಮಗುವಿನೊಂದಿಗೆ ಮಲಗಿದ್ದಾಗ ಇಂದು ಮುಂಜಾನೆ ಸುಮಾರು 3.30 ಗಂಟೆ ವೇಳೆಗೆ ಕುತ್ತಿಗೆ ಅದುಮಿ ಹತ್ಯೆಗೈಯ್ಯಲಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್ ಹಾಗೂ ಸಿಬ್ಬಂದಿ ಮಹಜರು ನಡೆಸಿದಾಗ ಪಲ್ಲವಿ ಅವರನ್ನು ಹತ್ಯೆಗೈದು ಪತಿ ಲೋಕೇಶ್ ಆರಾಧ್ಯ ಪರಾರಿಯಾಗಿದ್ದಾನೆ ಎಂಬುದು ತಿಳಿಯಿತು. ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಶ್ರೀಕಾಂತ್ ಅವರು ಬೆಳಗ್ಗೆ 10 ಗಂಟೆ ವೇಳೆಗೆ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದರು.

ತಲಕಾಡಿನವರಾದ ಪಲ್ಲವಿಯನ್ನು ಮೈಸೂರಿನಲ್ಲಿ ಬ್ಯಾಂಕ್ ಸಾಲ ಪಡೆಯುವವರ ಆಸ್ತಿ ದಾಖಲಾತಿಗಳನ್ನು ಪರಿಶೀಲಿಸಿ ಅದರ ನೈಜತೆ ಪರೀಕ್ಷಿಸುವ ವೃತ್ತಿ ಮಾಡುತ್ತಿದ್ದ ಲೋಕೇಶ್ ಆರಾಧ್ಯನಿಗೆ ಕೊಟ್ಟು 9 ವರ್ಷಗಳ ಹಿಂದೆ ವಿವಾಹ ಮಾಡಲಾಗಿತ್ತು. 7 ವರ್ಷದ ಗಂಡು ಮಗುವಿನೊಂದಿಗೆ ಮಲಗಿದ್ದ ಆಕೆಯನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಪತ್ನಿ ಮೇಲೆ ಸಂಶಯಗೊಂಡು ಆಗಿಂದಾಗ್ಗೆ ಜಗಳವಾಡುತ್ತಿದ್ದ ಲೋಕೇಶ್ ಆರಾಧ್ಯ, ಹಲವು ಬಾರಿ ಹಲ್ಲೆ ನಡೆಸಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಆರೋಪಿಯನ್ನು ಸಂಜೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಘಟನಾ ಸ್ಥಳಕ್ಕೆ ನಗರ ಪೊಲೀಸ್ ಕಮಿಷ್ನರ್ ಬಿ.ರಮೇಶ್, ಡಿಸಿಪಿ ಎಂ.ಮುತ್ತುರಾಜ್, ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿಗಳಾದ ಕೆ.ಎನ್.ಭಾರ್ಗವ್, ಬಿ.ಎಸ್. ಸುಹಾಸ್ ಭೇಟಿ ನೀಡಿ ಪರಿಶೀಲಿಸಿದರು.

ಶಾಸಕ ಶ್ರೀವತ್ಸರಿಗೆ ಸನ್ಮಾನ

ಮೈಸೂರು, ಜೂ.14-ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಶ್ರೀ ಗುರುದೇವಾಶ್ರಮದ ಶ್ರೀ ಶಾರದಾ ಸಂಸ್ಕೃತ ಪಾಠ ಶಾಲೆಯಲ್ಲಿ ಕೆ.ಆರ್.ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಪಾಠಶಾಲೆ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಸಮಿತಿ ಕಾರ್ಯದರ್ಶಿ ಸುಬ್ರಹ್ಮಣ್ಯ ಜೆಟ್ಟಪ್ಪ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಅಧ್ಯಕ್ಷ ಡಾ. ಚಂದ್ರಶೇಖರ್, ಉಪಾಧ್ಯಕ್ಷ ಕುನ್ನಿಕಣ್ಣನ್, ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಬೆಂಗಳೂರು-ಮೈಸೂರು ಹೈವೇಯಲ್ಲಿ ಭೀಕರ ಅಪಘಾತ: ಒಂದೇ ಕುಟುಂಬದ ಇಬ್ಬರ ಸಾವು, ನಾಲ್ವರಿಗೆ ಗಾಯ

ರಾಮನಗರ, ಜೂ.14- ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ನಿಧಾನವಾಗಿ ಚಲಿಸುತ್ತಿದ್ದ ಲಾರಿಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದ್ದು, ಕಾರಿನಲ್ಲಿದ್ದ ಒಂದೇ ಕುಟುಂಬದ ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ದುರ್ಘಟನೆ ಚನ್ನಪಟ್ಟಣದ ಬಳಿ ನಡೆದಿದೆ.

ಕಳೆದ ಮೂರು ದಿನಗಳ ಅಂತರದಲ್ಲಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಮತ್ತೊಂದು ಭೀಕರ ಅಪಘಾತ ಸಂಭವಿಸಿದೆ. ಎಕ್ಸ್‌ಪ್ರೆಸ್‌ವೇನಲ್ಲಿ ಚಲಿಸುತ್ತಿದ್ದ ಲಾರಿಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದಿದೆ. ಚನ್ನಪಟ್ಟಣದ ದೇವರಹೊಸಳ್ಳಿ ಗ್ರಾಮದ ಬಳಿ ಘಟನೆ ನಡೆದಿದೆ. ಒಂದೇ ಕುಟುಂಬದ ಇಬ್ಬರು ಸಾವು ಸ್ಥಳದಲ್ಲಿ ಸಾವನ್ನಪ್ಪಿದ್ದಾರೆ. 13 ವರ್ಷದ ಬಾಲಕಿ ಹಾಗೂ 20 ವರ್ಷದ ಯುವತಿ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಹೆಚ್.ಡಿ.ಕೋಟೆಯಿಂದ ಮದುವೆ ಮುಗಿಸಿ ಬೆಂಗಳೂರಿಗೆ ವಾಪಸ್ ಆಗುವ ವೇಳೆ ಈ ಅಪಘಾತ ಸಂಭವಿಸಿದೆ.

ಕಾರಿನಲ್ಲಿ ಹೋಗುತ್ತಿದ್ದವರು ಹಿಂಬದಿಯಿಂದ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಭೀಕರ ಅಪಘಾತ ಸಂಭವಿಸಿದೆ. ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಕಾರಿನಲ್ಲಿ ಒಟ್ಟು 6 ಜನರಿದ್ದು, ನಾಲ್ವರಿಗೆ ಗಂಭೀರ ಗಾಯವಾಗಿದೆ. ಈ ಪೈಕಿ ಒಬ್ಬರ ಸ್ಥಿತಿ ಚಿಂತಾಜನಕವಾಗಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಗಾಯಾಳುಗಳನ್ನು ರಾಮನಗರ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ಬೆನ್ನಲ್ಲೇ ಮೈಸೂರು ಜಿಪಂ ಚುರುಕು

ತಾಪಂ ಇಓಗಳೊಂದಿಗೆ ಸಭೆ; ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮಕ್ಕೆ ಸಿಇಓ ಸೂಚನೆ



ಮೈಸೂರು: ಜಿಪಂ ಮಿನಿ ಸಭಾಂಗಣದಲ್ಲಿ ಬುಧವಾರ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಜಿಲ್ಲೆಯ ಎಲ್ಲಾ ತಾಪಂ ಇಓಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು,ಜೂ.14(ಪಿಎಂ)- ರಾಜ್ಯದ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯಾದರೆ ಆಯಾಯ ಜಿಪಂ ಸಿಇಓಗಳನ್ನೇ ಹೊಣೆಯಾಗಿಸುವ ಮುಖ್ಯಮಂತ್ರಿಗಳ ಎಚ್ಚರಿಕೆ ಬೆನ್ನಲ್ಲೇ ಮೈಸೂರು ಜಿಲ್ಲಾ ಪಂಚಾಯಿತಿ ಚುರುಕುಗೊಂಡಿದೆ. ಆ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯರ ತವರು ಜಿಲ್ಲೆಯಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಸಕಲ ಸಿದ್ಧತೆಗೆ ಅಧಿಕಾರಿಗಳು ಮುಂದಾಗಿದ್ದಾರೆ.

ಸೋಮವಾರವಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಡಳಿತಗಳೊಂದಿಗೆ ವಿಡಿಯೋ ಸಂವಾದ ನಡೆಸಿ, ಸಮರ್ಪಕ ಕುಡಿಯುವ ನೀರು ಪೂರೈಸುವಂತೆ ಎಲ್ಲಾ ಜಿಪಂ ಸಿಇಓಗಳಿಗೆ ಸೂಚನೆ ನೀಡಿದ್ದರು. ನೆನ್ನೆಯಷ್ಟೇ ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ತಿ.ನರಸೀಪುರ ತಾಪಂ ಇಓ, ತಾಲೂಕಿನ ಎಲ್ಲಾ ಗ್ರಾಪಂ ಪಿಡಿಓಗಳ ಸಭೆ ನಡೆಸಿ, ಯಾವುದೇ ಹಳ್ಳಿಯಲ್ಲೂ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಲು ಸೂಚನೆ ನೀಡಿದ್ದರು. ಅಂತೆಯೇ ಮೈಸೂರು ಜಿಪಂ ಮಿನಿ ಸಭಾಂಗಣದಲ್ಲಿ ಬುಧವಾರ ಜಿಲ್ಲೆಯ ಎಲ್ಲಾ ತಾಪಂ ಇಓಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಕೆ.ಎಂ.ಗಾಯಿತ್ರಿ, ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸುವ ಜೊತೆಗೆ ಶುದ್ಧ ಕುಡಿಯುವ ನೀರು ಸರಬರಾಜು ಸಂಬಂಧ ಖಚಿತಪಡಿಸಿಕೊಳ್ಳಬೇಕೆಂದು ಸೂಚನೆ ನೀಡಿದರು.

ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು. ಜೊತೆಗೆ ಕುಡಿಯುವ ನೀರಿನ ಗುಣಮಟ್ಟದ ತಪಾಸಣೆ ನಡೆಸಬೇಕು. ಆ ಮೂಲಕ ನೀರು ಕುಡಿಯಲು ಯೋಗ್ಯವಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಎಲ್ಲಾ ಗ್ರಾಮಗಳಲ್ಲಿರುವ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್, ಕಿರುನೀರು ಸರಬರಾಜು ಯೋಜನೆಯ ನೀರಿನ ತೊಟ್ಟಿಗಳನ್ನು ಶುದ್ಧೀಕರಿಸಿ, ಗುಣಮಟ್ಟದ ಕುಡಿಯುವ ನೀರು ಪೂರೈಸಬೇಕು. ಅಲ್ಲದೆ, ಈ ಸಂಬಂಧ ವರದಿ ಸಲ್ಲಿಸಬೇಕು. ಜಾನುವಾರುಗಳಿಗೂ ಕುಡಿಯಲು ನೀರಿಗೆ ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ಇದಲ್ಲದೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2023-24ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಕಾಮಗಾರಿಗಳ ಪ್ರಗತಿ, 2023-24ನೇ ಸಾಲಿನ ಮಾನವ ದಿನಗಳ ಸೃಜನೆಯ ಪ್ರಗತಿ, ಅಮೃತ ಸರೋವರ ಯೋಜನೆಯ ಪ್ರಗತಿ, ಸ್ವಚ್ಛ ಭಾರತ್ ಅಭಿಯಾನದಡಿ ವೈಯಕ್ತಿಕ ಶೌಚಾಲಯ, ಸಮುದಾಯ ಶೌಚಾಲಯ, ಘನತ್ಯಾಜ್ಯ ವಿಲೇವಾರಿ ಘಟಕಗಳ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಚರ್ಚಿಸಿ, ಹಲವು ನಿರ್ದೇಶನ ನೀಡಿದರು.

ಡಿಜಿಟಲ್ ಗ್ರಂಥಾಲಯ, ತಾಪಂ ಮತ್ತು ಗ್ರಾಪಂ ಕಚೇರಿ ಕಟ್ಟಡ ಇಲ್ಲದ ಕಡೆ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ ಚರ್ಚೆ ನಡೆಸಿದ ಅವರು, ಬಾಕಿ ಮತ್ತು ಪ್ರಸ್ತುತ ಸಾಲಿನ ಬೇಡಿಕೆ ತೆರಿಗೆ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ ಹಿಸುವಂತೆ ಸೂಚಿಸಿದರು. ಜಿಪಂ ಉಪಕಾರ್ಯದರ್ಶಿ (ಅಭಿವೃದ್ಧಿ) ಡಾ.ಎಂ.ಕೃಷ್ಣರಾಜು, ಮುಖ್ಯ ಯೋಜನಾಧಿಕಾರಿ ಧನುಷ್, ಮುಖ್ಯ ಲೆಕ್ಕಾಧಿಕಾರಿ ಹೆಚ್.ಇ.ನಂದಾ, ಯೋಜನಾ ನಿರ್ದೇಶಕಿ ಸವಿತಾ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಾಜಿ ಸಿಎಂ ಬೊಮ್ಮಾಯಿ, ಹಿರಿಯ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ರಹಸ್ಯ ಸಭೆ

ದಾವಣಗೆರೆ, ಜೂ.14(ಬಿಎಲ್‌ಯು)– ಬಿಜೆಪಿ ಹಾಗೂ ಕಾಂಗ್ರೆಸ್‌ನ ಕೆಲವು ನಾಯಕರು ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್ ಮಾಡಿ



ಕೊಂಡಿದ್ದಾರೆ ಎಂಬ ಕಿಡಿ ಹೊತ್ತಿರುವ ವೇಳೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಸೀಕ್ರೇಟ್ ಮೀಟಿಂಗ್ ನಡೆಸಿದ್ದಾರೆ.

ದಾವಣಗೆರೆ ಹೊರ ವಲಯದ ಖಾಸಗಿ ರೆಸಾರ್ಟ್‌ನಲ್ಲಿ ಇಬ್ಬರು ನಾಯಕರು ಭೇಟಿಯಾಗಿ ಸುಮಾರು ಅರ್ಧ ಗಂಟೆಗಳ ಕಾಲ ಮಾತುಕತೆ ನಡೆಸಿದರು.

ರಾಜ್ಯದಲ್ಲಿ ಹೊಂದಾಣಿಕೆ ರಾಜಕಾರಣ ನಡೆದಿದೆ ಎಂಬ ಸ್ಫೋಟಕ ಹೇಳಿಕೆಗಳು ಒಂದೊಂದಾಗಿ ಸಿಡಿ ತಲೆಗಳಂತೆ ಸಿಡಿಯುತ್ತಿರುವ ಬೆನ್ನ ಹಿಂದೆಯೇ ಈ ಸಿಕ್ರೇಟ್ ಮಿಟಿಂಗ್ ನಡೆದಿರುವುದು ಬಹಳ ಮಹತ್ವ ಪಡೆದುಕೊಂಡಿದೆ.

ದಾವಣಗೆರೆಯಲ್ಲಿ ನಿನ್ನೆ ಜಿಲ್ಲಾ ಬಿಜೆಪಿ ಕಾರ್ಯಕಾರಣಿ ಸಭೆ ನಡೆದಿತ್ತು. ಹೊಂದಾಣಿಕೆ ರಾಜಕಾರಣ ಮಾಡಿ ಪಕ್ಷ ಸೋಲಿಸಿದ್ದೀರಿ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇನ್ನಿತರರು ಆಕ್ರೋಶ ವ್ಯಕ್ತಪಡಿಸಿದ್ದರು. ಮಧ್ಯಾಹ್ನ ಕೋರ್ ಕಮಿಟಿಯಲ್ಲಿ ಇದೇ ವಿಚಾರವಾಗಿ ಗಲಾಟೆಯಾದ ಬೆನ್ನಲ್ಲೇ ಸಾಯಂಕಾಲ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಶಾಮನೂರು ಶಿವಶಂಕರಪ್ಪ ಭೇಟಿಯಾಗಿದ್ದಾರೆ.

ಜಗದೀಶ್ ಶೆಟ್ಟರ್ ಮತ್ತೆ ಬಿಜೆಪಿಯತ್ತ ಸೆಳೆಯಲು ಕಾರ್ಯತಂತ್ರ ಸಾಧ್ಯತೆ

ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ನಡುವೆ ಬೀಗರ ಸಂಬಂಧ ಇದೆ. ಈ ಹಿನ್ನೆಲೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರ ಪ್ರಭಾವ ಬಳಸಿ ಜಗದೀಶ್ ಶೆಟ್ಟರ್ ಅವರನ್ನು ಮತ್ತೆ ಬಿಜೆಪಿಗೆ ಕರೆ ತರುವ ಪ್ರಯತ್ನವನ್ನು ಬಸವರಾಜ ಬೊಮ್ಮಾಯಿ ಮಾಡಿದ್ದಾರೆ. ಜಗದೀಶ್ ಶೆಟ್ಟರ್ ಮತ್ತೆ ಬಿಜೆಪಿಗೆ ಬಂದರೆ ಮುಂದಿನ ಲೋಕಸಭಾ ಚುನಾವಣೆಗೆ ಬಿಜೆಪಿಗೆ ಶಕ್ತಿ ಬರುತ್ತದೆ ಎಂಬುದು ಬಸವರಾಜ ಬೊಮ್ಮಾಯಿ ಅವರ ರಾಜಕೀಯ ಲೆಕ್ಕಾಚಾರ. ಇದಕ್ಕೆ ಬಿಜೆಪಿ ಹೈಕಮಾಂಡ್ ಕೂಡ ಅಸ್ತು ಎಂದಿದೆ ಎನ್ನಲಾಗಿದೆ. ಈ ಕಾರಣದಿಂದ ಶಾಮನೂರು ಶಿವಶಂಕರಪ್ಪ ಅವರ ಮೂಲಕ ಜಗದೀಶ್ ಶೆಟ್ಟರ್ ಅವರನ್ನು ಮತ್ತೆ ಬಿಜೆಪಿಗೆ ಕರೆ ತರುವ ರಾಜಕೀಯ ತಂತ್ರಗಾರಿಕೆಯನ್ನು ಬೊಮ್ಮಾಯಿ ರೂಪಿಸಿದ್ದಾರೆ.

ಜಗದೀಶ್ ಶೆಟ್ಟರ್ ಅವರಿಗೆ ಕಾಂಗ್ರೆಸ್ ಸಂಸ್ಕೃತಿ ಒಪ್ಪುವುದಿಲ್ಲ. ಈ ಹಿನ್ನೆಲೆಯಲ್ಲಿ ಶೆಟ್ಟರ್ ಅವರು ತಮ್ಮ ಭವಿಷ್ಯದ ರಾಜಕಾರಣದ ದೃಷ್ಟಿಯಿಂದ ಮತ್ತೆ ಬಿಜೆಪಿಗೆ ಬರುವುದು ಒಳಿತು ಎಂದು ಬೊಮ್ಮಾಯಿ ಅವರು ಶಾಮನೂರು ಶಿವಶಂಕರಪ್ಪ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ವಿಚಾರ ಅಲ್ಲದೆ ಬೇರೆ ಬೇರೆ ರಾಜಕೀಯ ವಿಚಾರದ ಬಗ್ಗೆ ಕೂಡ ಚರ್ಚೆ ನಡೆದಿದೆ ಎನ್ನಲಾಗಿದೆ.

ಕುವೆಂಪುನಗರದಲ್ಲಿ ಮಹಾಲಕ್ಷ್ಮಿ ಸ್ವೀಟ್ಸ್ 38ನೇ ಮಳಿಗೆ ಆರಂಭ





ಮೈಸೂರು, ಜೂ.14 (ಬಿಎಲ್‌ಯು)– ಕುವೆಂಪುನಗರದಲ್ಲಿ ತೆರೆದಿರುವ ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್‌ನ ನವೀಕರಣಗೊಂಡ 38ನೇ ಮಳಿಗೆ ಬುಧವಾರ ಆರಂಭಗೊಂಡಿತು. ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅವರು ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್‌ನ ನವೀಕರಣಗೊಂಡ ಮಳಿಗೆಯನ್ನು ಉದ್ಘಾಟಿಸಿ ಶುಭ ಹಾರೈಸಿದರು. ಈ ವೇಳೆ ಮಾಲೀಕರಾದ ಶಿವಕುಮಾರ್ ಉಪಸ್ಥಿತರಿದ್ದರು.

ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿ ಮುತ್ತುರಾಜ್, ಸಾಹಿತಿ ಕೆ.ಸಿ.ಶಿವಪ್ಪ, ವಿಶ್ರಾಂತ ಕುಲಪತಿ ಪ್ರೊ.ತಳವಾರ್, ಪರಿವರ್ತನಾ ಶಾಲೆಯ ಸಂಸ್ಥಾಪಕ ಚೇತನ ರಾಮ್, ಚೀಫ್ ಇಂಜಿನಿಯರ್ ದೇವನೂರು ಶಂಕರ, ಹೋಟೆಲ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ನಾರಾಯಣ ಗೌಡ, ಕಲ್ಯಾಣ ಮಂಟಪದ ಸಂಘದ ಅಧ್ಯಕ್ಷ ಸತ್ಯನಾರಾಯಣ ಹಾಗೂ ಹಲವು ಗಣ್ಯರು ಶುಭ ಹಾರೈಸಿದರು. ಉದ್ಘಾಟನೆ ಹಿನ್ನೆಲೆ ಸಮಾಜ ಸೇವಾ ಕಾರ್ಯ ಕೈಗೊಂಡ ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕ ಶಿವಕುಮಾರ್, ಹೆಚ್ಚು ಅಂಕ ಗಳಿಸಿದ 42 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಿದರು. ನವೀಕರಣಗೊಂಡ ಸ್ವೀಟ್ಸ್ ಮಳಿಗೆಯಲ್ಲಿ ಚಾಮುಂಡಿಬೆಟ್ಟ, ಜಂಬೂಸವಾರಿ, ದೊಡ್ಡ ಗಡಿಯಾರ ಸೇರಿದಂತೆ ಮೈಸೂರಿನ ಪಾರಂಪರಿಕ ಶೈಲಿಯ ಕಟ್ಟಡಗಳ ಚಿತ್ರಪಟಗಳು ಅಲಂಕಾರಗೊಂಡಿವೆ. 4 ಸಾವಿರ ಚದರ ಅಡಿಯಲ್ಲಿರುವ ಈ ಮಳಿಗೆಯಲ್ಲಿ 250 ಬಗೆಯ ನಾನಾ ಸ್ವೀಟ್ಸ್ ದೊರೆಯಲಿದೆ. ಪ್ರತಿದಿನ 20ಕ್ಕೂ ಹೆಚ್ಚು ಹೊಸ ಸಿಹಿ ತಿಂಡಿಗಳ ತಯಾರಿಸಲಾಗುವುದು ಎಂದು ಮಾಲೀಕ ಶಿವಕುಮಾರ್ ಮಾಹಿತಿ ನೀಡಿದರು.



ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಸಮಿತಿ ವತಿಯಿಂದ ದೇವಸ್ಥಾನದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಶಾಸಕ ಕೆ.ಹರೀಶ್‌ಗೌಡ ಅವರನ್ನು ಮೈಸೂರು ಪೇಟ ತೊಡಿಸಿ, ಸನ್ಮಾನಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಡಾ.ಮಹದೇವಯ್ಯ, ಕಾರ್ಯದರ್ಶಿ ಪ್ರೊ.ಕೆ.ಆರ್.ರಂಗಯ್ಯ, ಖಜಾಂಚಿ ಬರಕ್ಕಿ ಮಹಾದೇವಯ್ಯ, ಸಹ ಕಾರ್ಯದರ್ಶಿ ಆರ್.ಶಿವಲಿಂಗು, ಧರ್ಮದರ್ಶಿಗಳಾದ ಚಿತ್ರನಟ ಸೋಮಣ್ಣ, ಲಿಂಗಪ್ಪ, ಕೆ.ಶಿವಲಿಂಗು, ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ವಿಪಕ್ಷ ನಾಯಕ ಸ್ಥಾನಕ್ಕೆ ಫೈರ್ ಬ್ರ್ಯಾಂಡ್ ಯತ್ನಾಳ್: ರಾಜ್ಯ ಬಿಜೆಪಿ ಸಾರಥಿಯಾಗಿ ಡಾ.ಅಶ್ವಥ್‌ನಾರಾಯಣ್?

ಬೆಂಗಳೂರು, ಜೂ.14 (ಬಿಎಲ್‌ಯು)– ಕರ್ನಾಟಕದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಇನ್ನೇನು ತಿಂಗಳು ಕಳೆಯುತ್ತಾ ಬಂದಿದ್ದರೂ ಬಿಜೆಪಿ ಮಾತ್ರ ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡದೆ ಇನ್ನೂ ಜಾತಿ ಸಮೀಕರಣದ ರಾಜಕೀಯ ಲೆಕ್ಕಾಚಾರ ಹಾಕುತ್ತಿದೆ. ಇದಿಷ್ಟೇ ಅಲ್ಲದೆ ರಾಜ್ಯ ಬಿಜೆಪಿಗೆ ಹೊಸ ಸಾರಥಿಯನ್ನು ಆಯ್ಕೆ ಮಾಡಬೇಕಿದ್ದು, ಅದೂ ನನೆಗುದಿಗೆ ಬಿದ್ದಿದೆ.





ವಿಧಾನಸಭೆ ಚುನಾವಣೆಯಲ್ಲಿ ಒಕ್ಕಲಿಗ ಹಾಗೂ ಲಿಂಗಾಯತ ಮತದಾರರು ಬಿಜೆಪಿಯಿಂದ ಅಂತರ ಕಾಯ್ದುಕೊಂಡ ಕಾರಣ ಲೋಕಸಭಾ ಚುನಾವಣೆಯಲ್ಲಿ ಹೀಗೆ ಆಗಬಾರದು ಎಂದು ಅದೇ ಸಮುದಾಯದ ಪ್ರಭಾವಿಗಳನ್ನು ನೇಮಕ ಮಾಡಲು ಬಿಜೆಪಿ ಹೈಕಮಾಂಡ್ ಚಿಂತನೆ ನಡೆಸಿದೆ.

ಬಿಜೆಪಿಯ ಫೈರ್ ಬ್ರ್ಯಾಂಡ್ ಆಗಿರುವ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿ ಆಯ್ಕೆ ಮಾಡುವ ಮೂಲಕ ಲಿಂಗಾಯತ ಸಮುದಾಯದ ಕೋಪಕ್ಕೆ ಮುಲಾಮು ಹಚ್ಚಲು ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡಿದೆ ಎನ್ನಲಾಗಿದೆ.

ಇನ್ನು ಒಕ್ಕಲಿಗ ಸಮುದಾಯದಿಂದ ಶಾಸಕ ಡಾ.ಅಶ್ವಥ್ ನಾರಾಯಣ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿ, ಒಕ್ಕಲಿಗರಿಗೆ ಪ್ರಾತಿನಿಧ್ಯ ನೀಡಲು ಬಿಜೆಪಿ ಹೈಕಮಾಂಡ್ ನಿರ್ಧಾರ ಮಾಡಿದೆ ಎಂದು ತಿಳಿದುಬಂದಿದೆ.

ಶೋಭಾ ಕರಂದ್ಲಾಜೆ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷೆಯಾಗಿ ನೇಮಕ ಮಾಡಿ ಮಹಿಳೆಯರು ಹಾಗೂ ಒಕ್ಕಲಿಗರು ಎರಡೂ ಮತಗಳನ್ನು ಬಾಚಲು ಕೇಸರಿ ನಾಯಕರು ಮತ್ತೊಂದು ರೀತಿಯಲ್ಲಿ ಕೂಡ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಈ ರೀತಿಯ ಜಾತಿ ಸಮೀಕರಣದ ಮೂಲಕ ಲೋಕಸಭಾ ಚುನಾವಣೆಯಲ್ಲಿ ಒಕ್ಕಲಿಗರು ಹಾಗೂ ಲಿಂಗಾಯತರನ್ನು ಮತಬುಟ್ಟಿಗೆ ಹಾಕಿಕೊಳ್ಳಲು ಬಿಜೆಪಿ ವರಿಷ್ಠರು ರಾಜಕೀಯ ತಂತ್ರಗಾರಿಕೆ ರೂಪಿಸಿದ್ದಾರೆ. ರಾಜ್ಯ ವಿಧಾನಸಭೆ ಬಜೆಟ್ ಅಧಿವೇಶನಕ್ಕೂ ಮುನ್ನ ವಿರೋಧ ಪಕ್ಷದ ನಾಯಕ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಲು ಬಿಜೆಪಿ ತೀರ್ಮಾನಿಸಿದೆ.

ಬಿವಿಬಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಮರು ಮೌಲ್ಯಮಾಪನದಲ್ಲಿ ರಾಜ್ಯಕ್ಕೆ 4ನೇ ಸ್ಥಾನ

ಮೈಸೂರು, ಜೂ.14–ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಭಾರತೀಯ



ವಿದ್ಯಾಭವನದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಎಸ್.ಕಿರಣ್‌ಕುಮಾರ್ ಮರು ಮೌಲ್ಯಮಾಪನದಲ್ಲಿ 622 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾನೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾದಾಗ ಈತನಿಗೆ ಕನ್ನಡದಲ್ಲಿ 125, ಇಂಗ್ಲಿಷ್‌ನಲ್ಲಿ 97, ಹಿಂದಿಯಲ್ಲಿ 100, ಗಣಿತದಲ್ಲಿ 100, ವಿಜ್ಞಾನದಲ್ಲಿ 95 ಮತ್ತು ಸಮಾಜ ವಿಜ್ಞಾನದಲ್ಲಿ 99 ಸೇರಿ ಒಟ್ಟು 616 ಅಂಕ ಲಭಿಸಿತ್ತು. ಪ್ರತಿಭಾನ್ವಿತ ವಿದ್ಯಾರ್ಥಿಯಾದ ಈತ ತನಗೆ ಇನ್ನೂ ಹೆಚ್ಚಿನ ಅಂಕ ಬರಬೇಕಿತ್ತು ಎಂಬ ಆತ್ಮವಿಶ್ವಾಸದೊಂದಿಗೆ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದು, ಈಗ ಕನ್ನಡದಲ್ಲಿ 125, ವಿಜ್ಞಾನದಲ್ಲಿ 97 ಇತರ ಎಲ್ಲಾ ವಿಷಯಗಳಲ್ಲಿ ತಲಾ 100 ಅಂಕಗಳೊಂದಿಗೆ 622 ಅಂಕ ಪಡೆದು ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾನೆ. ಈತ ಇಲವಾಲ ಗ್ರಾಮದ ಬಿ.ಆರ್.ಸ್ವಾಮಿ ಎಂಬುವರ ಪುತ್ರ.

ಅರ್ಜಿ ಆಹ್ವಾನ

ಮೈಸೂರು,ಜೂ.14– ಟಿ.ನರಸೀಪುರ ತಾಲೂಕಿನ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಟಿ.ನರಸೀಪುರ ಟೌನ್, ಬನ್ನೂರು, ರಂಗಸಮುದ್ರ, ಮೂಗೂರು ವಿದ್ಯಾರ್ಥಿನಿಲಯಗಳಿಗೆ ಹಿಂದುಳಿದ ವರ್ಗಗಳ ಪ್ರವರ್ಗ 1, 2(ಎ), 2(ಬಿ), 3(ಎ) ಮತ್ತು 3(ಬಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 5ನೇ ತರಗತಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. https://shp.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದು. ಜೂ.30 ಅರ್ಜಿ ಸಲ್ಲಿಸಲು ಕಡೆಯ ದಿನ.

ಕಾಲ್‌ಗರ್ಲ್ ಸರ್ವೀಸ್ ನೀಡುವುದಾಗಿ ವ್ಯಕ್ತಿಗೆ 14.48 ಲಕ್ಷ ರೂ. ವಂಚನೆ

ಮೈಸೂರು, ಜೂ.14–ಕಾಲ್ ಗರ್ಲ್ ಸರ್ವೀಸ್ ನೀಡುವುದಾಗಿ ನಂಬಿಸಿ ವ್ಯಕ್ತಿಯೋರ್ವರನಿಂದ ಆನ್‌ಲೈನ್ ಮೂಲಕ 14.48 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ.

ನಂಜನಗೂಡು ತಾಲೂಕು ಹದಿನಾರು ಗ್ರಾಮದ ಸ್ವಾಮಿ(32) ವಂಚನೆಗೊಳಗಾದವರಾಗಿದ್ದು, ಇವರ ಫೇಸ್‌ಬುಕ್ ಮೆಸೆಂಜರ್‌ಗೆ ಪಲ್ಲವಿ ಎಂಬ ಹೆಸರಿನ ಅಕೌಂಟ್‌ನಿಂದ 2022ರ ಡಿ.3ರಂದು ರಿಕ್ವೆಸ್ಟ್ ಬಂದಿದೆ. ಅದನ್ನು ಸ್ವೀಕರಿಸಿ ಚಾಟ್ ಮಾಡಿದಾಗ ತನ್ನನ್ನು ಪಲ್ಲವಿ ಎಂದು ಆಡಿಯೋ ಕಾಲ್ ಮೂಲಕ ಪರಿಚಯಿಸಿಕೊಂಡ ಯುವತಿ, ನಾವು ಕಾಲ್ ಗರ್ಲ್ ಸರ್ವೀಸ್ ಸೇವೆ ಕೊಡುತ್ತೇವೆ ಎಂದು ಹೇಳಿದ್ದಾಳೆ. ಸರ್ವೀಸ್‌ಗೆ ಗೂಗಲ್ ಪೇ ಅಥವಾ ಫೋನ್ ಪೇ ಮೂಲಕ ಹಣ ಪಾವತಿಸಬೇಕಾಗುತ್ತದೆ ಎಂದು ಆಕೆ ಹೇಳಿದ್ದನ್ನು ನಂಬಿದ ಸ್ವಾಮಿ ಮೊದಲಿಗೆ 2023ರ ಜ.23ರಂದು 4 ಹಂತಗಳಲ್ಲಿ ಆಕೆ ತಿಳಿಸಿದ್ದ 7353631473 ಸಂಖ್ಯೆಗೆ 48,500 ರೂ. ಪಾವತಿಸಿ, ಹುಡುಗಿಯನ್ನು ಕಳುಹಿಸುವಂತೆ ಕೇಳಿದ್ದಾನೆ.

ಇನ್ನೂ ಹೆಚ್ಚಿನ ಹಣ ಕಳುಹಿಸಿದರೆ, ಸುಂದರವಾದ ಹುಡುಗಿಯರನ್ನು ಕಳುಹಿಸುವುದಾಗಿ ಆಕೆ ತಿಳಿಸಿದ್ದಾಳೆ. ಅಂದಿನಿಂದ ಕಳೆದ ಮೇ 25ರವರೆಗೆ ಸ್ವಾಮಿ ಒಟ್ಟು 14,48,500 ರೂ.ಗಳನ್ನು ವರ್ಗಾವಣೆ ಮಾಡಿದ್ದು, ಈತನಿಗೆ ಯಾವುದೇ ರೀತಿಯ ಕಾಲ್ ಗರ್ಲ್ ಸರ್ವೀಸ್ ದೊರೆಯಲಿಲ್ಲ. ಫೇಸ್‌ಬುಕ್ ಮೆಸೆಂಜರ್‌ನಲ್ಲಿ ಮೊದಲಿಗೆ ಪಲ್ಲವಿ ಎಂಬ ಹೆಸರಿನ ಯುವತಿ ಮಾತನಾಡಿದರೆ, ನಂತರ ಅಂಜಲಿ, ಸುಮಾ, ಸ್ನೇಹಾ ಎಂಬ ಹೆಸರಿನ ಯುವತಿಯರು ಕೇವಲ ಆಡಿಯೋ ಕಾಲ್ ಮೂಲಕ ಮಾತ್ರ ಮಾತನಾಡಿದ್ದಾರೆಯೇ ಹೊರತು, ಅವರ ಮುಖವನ್ನು ನೋಡಿಲ್ಲ ಎಂದು ಸ್ವಾಮಿ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಶಾದಿ ಡಾಟ್ ಕಾಂನಲ್ಲಿ ವೈದ್ಯನೆಂದು ಪರಿಚಯಿಸಿಕೊಂಡು ಸಾಫ್ಟ್‌ವೇರ್ ಇಂಜಿನಿಯರ್ ಮದುವೆಯಾಗಿ ವಂಚನೆ

15 ಲಕ್ಷ ರೂ. ನಗದು, 200 ಗ್ರಾಂ ಚಿನ್ನಾಭರಣ ದೋಚಿರುವ ಬಗ್ಗೆ ಪ್ರಕರಣ ದಾಖಲು

ಮೈಸೂರು, ಜೂ.14–ಶಾದಿ ಡಾಟ್ ಕಾಂನಲ್ಲಿ ವೈದ್ಯನೆಂದು ಪರಿಚಯವಾದ ವ್ಯಕ್ತಿ, ಸಾಫ್ಟ್‌ವೇರ್ ಇಂಜಿನಿಯರ್ ಅನ್ನು ವಿವಾಹವಾಗಿ ಕೇವಲ ಒಂದೇ ವಾರದಲ್ಲಿ ಆಕೆಯ 15 ಲಕ್ಷ ನಗದು ಮತ್ತು 20 ತೊಲ (200 ಗ್ರಾಂ) ಚಿನ್ನದ ಒಡವೆಗಳೊಂದಿಗೆ ಪರಾರಿಯಾಗಿರುವ ಬಗ್ಗೆ ವರದಿಯಾಗಿದೆ.

ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಹೇಮಲತಾ(45) ವಂಚನೆಗೊಳಗಾದವರಾಗಿದ್ದು, ಮೈಸೂರಿನ ಆರ್.ಟಿ.ನಗರದ ಎಸ್‌ಬಿಎಂ ಬಡಾವಣೆ ನಿವಾಸಿ ಕೆ.ಬಿ.ಮಹೇಶ್(46) ವಂಚಕನಾಗಿದ್ದಾನೆ.

ವಿವರ: ಹೇಮಲತಾ ಅವರು ವಿವಾಹವಾಗಲು ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ವರನನ್ನು ಹುಡುಕುತ್ತಿದ್ದಾಗ 2022ರ ಆ.22ರಂದು ಮಹೇಶ್ ಆಕೆಗೆ ರಿಕ್ವೆಸ್ಟ್ ಕಳುಹಿಸಿದ್ದಾನೆ. ತಾನು ಆರ್ಥೋ ಡಿಎನ್‌ಬಿ ಡಾಕ್ಟರ್ ಆಗಿದ್ದು, ಮೈಸೂರಿನಲ್ಲಿ ವಾಸವಿರುವುದಾಗಿ ಪರಿಚಯಿಸಿಕೊಂಡ ಈತ ಹೇಮಲತಾರನ್ನು ಮದುವೆಯಾಗಲು ಇಚ್ಛಿಸುವುದಾಗಿ ತಿಳಿಸಿದ್ದಾನೆ.

ಇವರಿಬ್ಬರು 2022ರ ಸೆ.22ರಂದು ಬೆಂಗಳೂರಿನ ಮಾರತ್‌ಹಳ್ಳಿಯಲ್ಲಿರುವ ಫ್ರೂಟ್ ಜ್ಯೂಸ್ ಶಾಪ್ ಬಳಿ ಭೇಟಿಯಾಗಿದ್ದಾರೆ. ನಂತರ ಮೊಬೈಲ್ ಮೂಲಕ ಸಂಪರ್ಕದಲ್ಲಿದ್ದು, ಆತ 2022ರ ಡಿ.22ರಂದು ಹೇಮಲತಾರನ್ನು ಮೈಸೂರಿಗೆ ಕರೆಸಿಕೊಂಡು ಚಾಮುಂಡಿ ಬೆಟ್ಟಕ್ಕೆ ಕರೆದೊಯ್ದ ನಂತರ ಆರ್.ಟಿ.ನಗರ ಎಸ್‌ಬಿಐಎಂ ಬಡಾವಣೆಯ 136ನೇ ಸಂಖ್ಯೆಯ ಮನೆಗೆ ಕರೆತಂದು, ವಿಜಯನಗರ 4ನೇ ಹಂತದಲ್ಲಿ ಸದ್ಯದಲ್ಲೇ ಕ್ಲಿನಿಕ್ ತೆರೆಯಲಿರುವುದಾಗಿ ನಂಬಿಸಿದ್ದಾನೆ.

ಈ ವಿಚಾರವನ್ನು ಹೇಮಲತಾ ಅವರು ತಮ್ಮ ಕುಟುಂಬದವರಿಗೆ ತಿಳಿಸಿ ಅವರ ಒಪ್ಪಿಗೆ ಪಡೆದು 2023ರ ಜ.28ರಂದು ವಿಶಾಖಪಟ್ಟಣದ ಡಾಲ್ಫಿನ್ ಹೋಟೆಲ್‌ನಲ್ಲಿ ಮಹೇಶನೊಂದಿಗೆ ವಿವಾಹವಾಗಿ, ಮರುದಿನ ಮೈಸೂರಿಗೆ ಬಂದಿದ್ದಾರೆ. 2022ರ ಜ.30 ರಂದು ಆಪರೇಷನ್ ಕೆಲಸವಿದೆ ಎಂದು ಮನೆಯಿಂದ ಹೊರ ಹೋದ ಮಹೇಶ, 3 ದಿನದ ನಂತರ ಬಂದು ತಾನು ಕ್ಲಿನಿಕ್ ತೆರೆಯಲು 70 ಲಕ್ಷ ರೂ. ಲೋನ್ ತೆಗೆದುಕೊಡುವಂತೆ ಹೇಮಲತಾರನ್ನು ಒತ್ತಾಯಿಸಿದ್ದಾನೆ. ಅದಕ್ಕೆ ಅವರು ಒಪ್ಪದಿದ್ದಾಗ ಕೊಲೆ ಬೆದರಿಕೆ ಹಾಕಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಳೆದ ಫೆ.5ರಂದು ಈತ ಮನೆಯ ಬೀರುವಿನಲ್ಲಿಟ್ಟಿದ್ದ ಹೇಮಲತಾ ಅವರ 15 ಲಕ್ಷ ರೂ. ನಗದು ಮತ್ತು 20 ತೊಲ ಚಿನ್ನಾಭರಣದೊಂದಿಗೆ ಮನೆಯಿಂದ ಹೊರ ಹೋದವನು ವಾಪಸ್ಸಾಗಿಲ್ಲ. ಆತನ ಮೊಬೈಲ್ ಕೂಡ ಸ್ವಿಚ್ ಆಫ್ ಆಗಿದೆ. ಹೀಗಿರುವಾಗ ಬೆಂಗಳೂರಿನಲ್ಲಿರುವ ದಿವ್ಯಾ ಎಂಬಾಕೆ ಮೈಸೂರಿನ ಆರ್.ಟಿ.ನಗರದ ಮನೆಗೆ ಬಂದು ತನ್ನನ್ನೂ ಕೂಡ ಮಹೇಶ ಮದುವೆಯಾಗಿದ್ದಾನೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ತಾನು ಮೋಸ ಹೋಗಿರುವುದನ್ನು ಅರಿತು ಹೇಮಲತಾ ಜೂ.13ರಂದು ನೀಡಿದ ದೂರಿನನ್ವಯ ಭಾರತೀಯ ದಂಡ ಸಂಹಿತೆ 420, 406, 506ರಡಿ ಪ್ರಕರಣ ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್ ತನಿಖೆ ಮುಂದುವರೆಸಿದ್ದಾರೆ.

ವಂಚಿಸುವುದಕ್ಕಾಗಿಯೇ ಮ್ಯಾಟ್ರಿಮೋನಿ ಮೂಲಕ ಸ್ಥಿತಿವಂತ ಮಹಿಳೆಯರನ್ನು ಪರಿಚಯಿಸಿಕೊಂಡು ಮದುವೆಯಾದ ನಂತರ ಅವರ ಹಣ ಮತ್ತು ಚಿನ್ನ ಲಪಟಾಯಿಸುವ ಕಾರ್ಯದಲ್ಲಿ ಈತ ತೊಡಗಿರಬಹುದು ಎಂದು ಶಂಕಿಸಲಾಗಿದೆ. ಹೇಮಲತಾ ಅವರಿಗೆ ಹೇಳಿಕೊಂಡಂತೆ ಈತ ನಿಜವಾಗಿಯೂ ವೈದ್ಯನೇ? ಅಥವಾ ವೈದ್ಯನೆಂಬ ಸೋಗಿನಲ್ಲಿ ವಂಚಿಸಿದ್ದಾನೆಯೇ? ಆರ್.ಟಿ.ನಗರದಲ್ಲಿ ಈತ ವಾಸವಾಗಿದ್ದ ಮನೆ ಸ್ವಂತದ್ದೇ ಅಥವಾ ಬಾಡಿಗೆಯದ್ದೇ? ಎಂಬ ವಿವರಗಳು ಪೊಲೀಸರ ತನಿಖೆಯಿಂದ ಹೊರ ಬರಬೇಕಾಗಿದೆ.

ನಿಧನ

ಬ್ರಹ್ಮಾಕುಮಾರಿ ನಾಗರತ್ನಾಜಿ



ಮೈಸೂರು, (ಲಿಂಗದೇವರಕೊಪ್ಪಲು), ಜೂ. 14– ಮೈಸೂರಿನ ರಿಟ್ರೀಟ್ ಸೆಂಟರ್ ನಿವಾಸಿ ರಾಜಯೋಗಿನಿ ಬ್ರಹ್ಮಾಕುಮಾರಿ ನಾಗರತ್ನಾಜೀ (69) ಮಂಗಳವಾರ ರಾತ್ರಿ ನಿಧನರಾದರು. ಇವರು ಸುಮಾರು 50 ವರ್ಷಗಳಿಂದ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಸಮರ್ಪಿತರಾಗಿ, ಯಾವುದೇ ಫಲಾಫಲ ಅಪೇಕ್ಷೆ ಇಲ್ಲದೆ ರಾಜಯೋಗ ಶಿಕ್ಷಕಿಯಾಗಿ ಆಧ್ಯಾತ್ಮಿಕ ಸೇವೆಯನ್ನು ಸಲ್ಲಿಸಿದ್ದರು. ಅಪಾರ ರಾಜಯೋಗ ವಿದ್ಯಾರ್ಥಿಗಳು, ರಾಜಯೋಗ ಶಿಕ್ಷಕಿಯರು, ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜೀ ಹಾಗೂ ಅವರ ಒಡಹುಟ್ಟಿದವರ ಸಮ್ಮುಖದಲ್ಲಿ ಹೂಟಗಳ್ಳಿ ಮುಕ್ತಿಧಾಮದಲ್ಲಿ ಬುಧವಾರ ಈಶ್ವರೀಯ ವಿವಿಯ ವಿಧಿವಿಧಾನದಂತೆ ಮೃತರಿಗೆ ಶಿವಧ್ವಜ ತೊಡಿಸಿ, ಅಂತ್ಯಕ್ರಿಯೆ ಮಾಡಲಾಯಿತು.

ಪಾಲಚಂಡ ಸೀತಮ್ಮ ವೂತಯ್ಯ



ಮೈಸೂರಿನ ಗೋಕುಲಂ 3ನೇ ಹಂತ, 7ನೇ ಮೇನ್, ಮನೆ ನಂ.1030ರ ನಿವಾಸಿ ದಿವಂಗತ ವೂತಯ್ಯ ಅವರ ಪತ್ನಿ ಪಾಲಚಂಡ ಸೀತಮ್ಮ ವೂತಯ್ಯ (ಪಂಡಂಡ) ಅವರು ಬುಧವಾರ ಮುಂಜಾನೆ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು.

ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ದೇಹವನ್ನು ಜೆಎಸ್‌ಎಸ್ ಆಸ್ಪತ್ರೆಗೆ ಬುಧವಾರ ದಾನ ನೀಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಬ್ದುಲ್ ರೆಹಮಾನ್ ಖಾನ್



